ನಹಾನುಭೂತಿ ಸರ್ಕಾರದವರಿಗಿದೆ. ನಾವು ಈಗಾಗಲೇ ಕಳುಹಿಸಿರುವ ಉತ್ತರಕ್ಕೆ ನಮಗೆ ಆ ಕೇಂದ್ರ ಪ್ಲಾನಿಂಗ್ ಸಮಿತಿಯವರಿಂದ ಭರವಸೆಕೊಡುವಂಥ ಒಂದು ಉತ್ತರ ಬಂದರೆ ನಾವು ಇದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರುತ್ತೇವೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನಾದ್ದರಿಂದ ತಾವು ಈ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—What does the Hon'ble Member say ?

ಶ್ರೀ ಬಿ. ರಾಚಯ್ಯ.—ಮಾನ್ಯ ಮಂತ್ರಿಗಳು ಈ ನಿರ್ಣಯದ ಬಗ್ಗೆ ಅವರ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವುದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನು ಬೇಡುತ್ತೇನೆ.

The Resolution was by leave withdrawn.

No. (2) Appointment of a Harijan Member to the Mysore Public Service Commission.

Sri R. MUNISWAMIAH (Bangalore North—Scheduled Castes).—My resolution reads like this:

> "This Assembly is of the opinion that a Harijan member be appointed immediately to the Mysore Public Service Commission."

I am placing this resolution before this House with the hope of getting hearty support and approval to this important resolution. This resolution is very important because it concerns particularly the Harijans who form one-fifth of the population of our State.

ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಆರ್ಟಿಕಲ್ 315, 316 ಮತ್ತು 318ರ ಪ್ರಕಾರ ದೇಶದಲ್ಲಿ ಒಂದು ಪಬ್ಲಿಕ್ ಸರ್ವೀಸ್ ಕಮಿಷನ್ನನ್ನು ಸ್ಥಾಪನೆ ಮಾಡಬೇಕೆಂಬ ವಿಚಾರವನ್ನು ತಿಳಿಸಲಾಗಿದೆ. ಈ ವಿಧಿಗಳಲ್ಲಿ ಆ ಕಮಿಷನ್ನಲ್ಲಿ ಎಷ್ಟು ಜನ ಸದಸ್ಯರಿರಬೇಕು, ಎಷ್ಟು ಜನರು ಥೇರ್ಮನ್ನರು ಇರಬೇಕು ಎಂಬ ಅಂಶಗಳನ್ನೆಲ್ಲಾ ನಿರೂಪಣೆ ಮಾಡಿದ್ದಾರೆ. 1950ರಲ್ಲಿ ಈ ವಿಧಿಗಳಿಗನುಗುಣವಾಗಿ ನಮ್ಮ ರಾಜಪ್ರಮುಖರವರು ನಮ್ಮ ಸಂಸ್ಥಾನದಲ್ಲಿ ಒಂದು ಪಬ್ಲಿಕ್ ಸರ್ವೀಸ್ ಕಮಿಷನ್ನನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಒಂದು ರೆಗ್ಯುಲೇಷನ್ನನ್ನೂ ನಿರೂಪಣೆ ಮಾಡಿದರು. ಅದಕ್ಕನುಸಾರವಾಗಿ ಆ ಸಂಸ್ಥೆಗೆ ಒಬ್ಬರು ಥೇರ್ಮನ್ನರನ್ನು ಮತ್ತು ಎರಡು ಜನ ಸದಸ್ಯರುಗಳನ್ನೂ ನೇಮಕ ಮಾಡಿದರು. ಈಗ ಹೀಗೆ ನೇಮಕಮಾಡಿರುವ ಸದಸ್ಯರುಗಳನ್ನು ನೋಡಿದರೆ ನಮ್ಮ ದೇಶದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರತಕ್ಕಂಥ ಎರಡು ಪಂಗಡಗಳವರಿಗೆ ಮಾತ್ರವೇ ಇದರಲ್ಲಿ ಪ್ರಾತಿನಿಧ್ಯ ದೊರೆಕಿಸಿಕೊಟ್ಟಿರುವ ಹಾಗೆ ಕಾಣಿಸುತ್ತಿದೆ. ಹೀಗೇ ನಾವು ಇನ್ನೂ ಮುಂದೆ ಹೋಗಿ ನೋಡುವುದಾದರೆ ಈ ಎರಡು ಕೋಮುಗಳಷ್ಟೇ ಮೆಜಾರಿಟಿ ಇರತಕ್ಕಂಥ ಹರಿಜನ ಜನಾಂಗದವರಿಗೊಂದು ಸ್ಥಾನವನ್ನು ಇದರಲ್ಲಿ ಕೊಡಬೇಕೆಂಬ ವಿಚಾರದಲ್ಲಿ ತಾತ್ಸಾರ ಮಾಡಿದ್ದಾರೆಂದು ಹೇಳ ಬಯಸುತ್ತೇನೆ. ಹೀಗೆ ಒಬ್ಬ ಹರಿಜನ ಸದಸ್ಯರನ್ನು ಇದಕ್ಕೆ ಸರ್ಕಾರದವರು ನೇಮಕ ಮಾಡದೆ ಹೋಗಿರುವುದರಿಂದ ದೇಶದಲ್ಲಿರತಕ್ಕ ಹರಿಜನ ಜನಾಂಗದವರಿಗೆ ಬಹಳಮಟ್ಟಿಗೆ ಈ ಸರ್ಕಾರಿ ಉದ್ಯೋಗಗಳ ಬಗ್ಗೆ ನ್ಯಾಯವಾಗಿ ಅವರಿಗೆ ದೊರಕಬೇಕಾಗಿದ್ದ ಸ್ಥಾನಗಳು ದೊರಕದೆ ಇವರಿಗೆ ಸ್ವಲ್ಪಮಟ್ಟಿಗೆ ಕುಂದುಕೊರತೆಯುಂಟಾಗಿದೆಯೆಂದು ಹೇಳುತ್ತೇನೆ. ಈ ಹಿಂದೆ ಈಗಿರತಕ್ಕ ಪಬ್ಲಿಕ್ ಸರ್ವೀಸ್ ಕಮಿಷನ್ನನ್ನು ಸ್ಥಾಪಿಸುವುದಕ್ಕೆ ಮುಂಚೆ ನಮ್ಮ ಸಂಸ್ಥಾನದಲ್ಲಿ ಸೆಂಟ್ರಲ್ ರೆಕ್ರೂಟಿಂಗ್ ಮೆಂಟ್ ಬೋರ್ಡ್ ಎಂಬುದಾಗಿ ಒಂದು ಬೋರ್ಡಿತ್ತು. ಆಗ್ಗೆ ಆ ಬೋರ್ಡಿಗೆ ಒಬ್ಬ ಹರಿಜನ ಸದಸ್ಯರನ್ನು ತೆಗೆದುಕೊಂಡಿದ್ದರು. ಆಗ ಸರ್ಕಾರಿ ಉದ್ಯೋಗಗಳ ಬಗ್ಗೆ ಹರಿಜನ ಜನಾಂಗದವರಿಗೆ ಯಾವ ಅನ್ಯಾಯಗಳೂ ಆಗದ ಇರುವಂತೆ ಅವರು ನೋಡಿಕೊಳ್ಳುತ್ತಿದ್ದರು. ಆದರೆ ಈಗಿನ ವ್ಯವಸ್ಥೆಯಲ್ಲಿ ಕೂಡ ಅಂಥ ಒಂದು ಪದ್ಧತಿಯನ್ನು ಅನುಸರಿಸದಿರುವುದು ಈ ಜನಾಂಗದವರ ದುರದೃಷ್ಟವೆಂದು ನಾನು ಭಾವಿಸುತ್ತೇನೆ. ಹೀಗೆ ಒಬ್ಬ ಹರಿಜನ ಸದಸ್ಯರು ಈ ಡಿವನ P.S.C. ಯಲ್ಲಿಲ್ಲದೆ ಇರುವುದರಿಂದ ಇವರಿಗೆ ಅನೇಕ ತೊಂದರೆಗಳು ಒದಗಿರುತ್ತವೆ. ಸರ್ಕಾರಿ ಉದ್ಯೋಗಗಳಲ್ಲಿ ಇವರಿಗೆ ನ್ಯಾಯವಾಗಿ ದೊರೆಯಬೇಕಾಗಿದ್ದವುಗಳೂ ಸಹ ಇವರಿಗೆ ದೊರೆಯದೆ ತುಂಬಾ ತೊಂದರೆ ಬಂದಿದೆಯೆಂದು ಹೇಳುತ್ತೇನೆ. ನಮ್ಮ ಹರಿಜನ ಜನಾಂಗಕ್ಕೆ ಇತ್ತೀಚೆಗೆ ಮಾಸಲಾಗಿಟ್ಟಿರುವ ಶೇಕಡ 18ರಷ್ಟು ಸ್ಥಾನಗಳೂ ಕೂಡ ಅವರಿಗೀಗ ಸರಿಯಾಗಿ ದೊರೆಕುತ್ತಿಲ್ಲ. ಈ ರೀತಿಯಾಗಿ ಶೇಕಡಾ 18ರಷ್ಟು ಸ್ಥಾನಗಳನ್ನು ಈ ನಿಮ್ನ ವರ್ಗದವರುಗಳಿಗೆ ಮಾಸಲಾಗಿದಬೇಕೆಂಬ ಸರ್ಕಾರಿ ಆಜ್ಞೆ 1955ರಲ್ಲಿ ಹೊರಬಿತ್ತು. ಇಂಥ ಒಂದು ಆಜ್ಞೆ ಹೊರಡಿಸಬೇಕೆಂಬುದಾಗಿ ನಾವು ಸರ್ಕಾರದವರಿಗೆ ಒತ್ತಾಯಪಡಿಸುವುದಕ್ಕೆ ಪ್ರಾರಂಭಿಸಿದ ಐದು ವರ್ಷಗಳ ನಂತರ ಅವರು ಈ ಒಂದು ಆಜ್ಞೆಯನ್ನು ಈಗಹೊರಡಿಸಿರುತ್ತಾರೆ. ಹೀಗೊಂದು ಆರ್ಡರನ್ನು ಹೊರಡಿಸಲು ಇವರು ಐದು ವರ್ಷಗಳ ಕಾಲವನ್ನು ತೆಗೆದುಕೊಂಡಿದ್ದರ ಪರಿಣಾಮವಾಗಿ ಈ ಡಿವನ ಹರಿಜನರಿಗೆ ನ್ಯಾಯವಾಗಿ ದೊರಕಬೇಕಾದ ಬಾಲಬಿದ್ದಂಥ ಸ್ಥಾನಗಳೇ ಬಹಳ ಕಡಮೆಯಾಗಲು ಅವಕಾಶ ಆಯಿತು. ಇಷ್ಟೇ ಅಲ್ಲ. ಈ ಒಂದು ನಿರೂಪಣೆ ಹೊರಟಿರುವುದಾದರೂ ಕೇವಲ ನಾನ್ ಗೆಜೆಟೆಡ್ ಹುದ್ದೆಗಳಿಗೆ ಮಾತ್ರವೇ ಹೊರತು ಗೆಜೆಟೆಟ್ ಹುದ್ದೆಗಳಿಗಲ್ಲ. ಇಂಥದೇ ಒಂದು ಆಜ್ಞೆಯನ್ನು ಈ ಗೆಜೆಟೆಡ್ ಹುದ್ದೆಗಳಿಗೂ ಸಹ ನಮ್ಮ ಸರ್ಕಾರ ಯಾವತ್ತು ಹೊರಡಿಸುತ್ತದೋ ಆ ವಿಚಾರವನ್ನು ತಾವುಗಳೇ ಊಹಿಸಬೇಕಾಗಿದೆ. ಈ ಕಾರಣಗಳಿಗಾಗಿಯೇ ನಾನೀಗ ಆ P.S.C.ಗೆ ಒಬ್ಬರು ಹರಿಜನ ಸದಸ್ಯರನ್ನು ನೇಮಕಮಾಡತಕ್ಕ ಅಗತ್ಯ ಬಹಳ ವಾಗಿದೆ ಎಂದು ಹೇಳುತ್ತಿದ್ದೇನೆ.

ಆದ್ದರಿಂದ ನಾವು ಸ್ವಲ್ಪ ಯೋಚನೆ ಮಾಡಿ ನೋಡಿದ ಪಕ್ಷದಲ್ಲಿ ಐದು ವರ್ಷಗಳಿಂದಲೂ ನಮಗೆ ಈಗಿರತಕ್ಕ ತೊಂದರೆಗಳನ್ನು ಹಾಗ್ರತೆ ತಪ್ಪಿಸಿಕೊಳ್ಳುವುದಕ್ಕೆ ಮತ್ತು ಈಗಿರತಕ್ಕ ನಷ್ಟವನ್ನು ಜಾಗ್ರತೆ

(ಶ್ರೀ ಆರ್. ಮುನಿಸ್ವಾಮಯ್ಯ.)

ನರಿಪಡಿಸುವುದಕ್ಕೆ ಒಬ್ಬ ಹರಿಜನ ಕೋಮಿನ ಸದಸ್ಯರನ್ನು ನಮ್ಮ ಮೈಸೂರು ದೇಶದ Public Service Commissionಗೆ ನೇಮಿಸಬೇಕು ಎಂದು ಹೇಳುತ್ತೇನೆ. ಈಗ ನಮ್ಮಲ್ಲಿ qualifications ಇರತಕ್ಕ ಬೇಕಾದಷ್ಟು ಮಂದಿ ವಿದ್ಯಾವಂತರು ಇದ್ದಾರೆ. ನೌಕರಿಗಳಲ್ಲೂ ಸಹ ನರಿಯಾದ ಯೋಗ್ಯತೆಯನ್ನು ಪಡೆದಿರತಕ್ಕ ಅಧಿಕಾರಿಗಳೂ ಇದ್ದಾರೆ. ಈಗ ಕೆಲವು ಅಧಿಕಾರಿಗಳ ಹುದ್ದೆಗಳ ಪಟ್ಟಿಗಳನ್ನು ತಯಾರು ಮಾಡಿದ್ದಾರೆ. ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್‌ಗಳನ್ನು ನೇಮಿಸುವ ಕಾಲದಲ್ಲೂ ಸಹ ಈ ಜಾತಿಯವರನ್ನು ಗಣನೆಗೆ ತೆಗೆದ ಕೊಂಡ ಹಾಗೆ ಕಾಣಲಿಲ್ಲ. ಒಂದು ಪಟ್ಟಿಯಲ್ಲಿಯೂ ಹರಿಜನರ ಹೆಸರುಗಳು ಕಾಣಲಿಲ್ಲ. ಕೆಲವು ಅಧಿಕಾರಿ ಹುದ್ದೆಗಳಿಗೆ ಕೇವಲ seniorityಯನ್ನು ಮಾತ್ರ ಲೆಕ್ಕಕ್ಕೆ ಇಟ್ಟುಕೊಂಡು ನೇಮಕ ಮಾಡಿದ್ದಾರೆ. Direct recruitment ಮಾಡುವ ಪಕ್ಷದಲ್ಲಿ ಹರಿಜನರಿಗೆ ಕೊಡತಕ್ಕ ಭಾಗವನ್ನು ಅವರಿಗೆ ಕೊಡಬೇಕಾಗುತ್ತದೆ ಎಂದು ಬೇರೆ ರೀತಿ ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಹರಿಜನರಿಗೆ ಬರತಕ್ಕ ಹಕ್ಕನ್ನು ತಪ್ಪಿಸಿ ನ್ಯಾಯವನ್ನು ನಲ್ಲಿಸಡೆ ನಮಗೆ ಅನ್ಯಾಯ ಮಾಡಿದ್ದಾರೆ. Constitutionನಲ್ಲಿ Scheduled Casteನ ಜನರು Public Service Commissionನಲ್ಲಿ ಇರಬೇಕು ಎಂದು ಹೇಳಲಿಲ್ಲ. ಆದುದರಿಂದ ಅಷ್ಟೆ ಸಾಕು ಎಂದು ತಿಳಿದು ಕೊಂಡಂತಿದೆ.

ಶ್ರೀ ಪಿ. ಆರ್. ರಾಮಯ್ಯ (ಬನವನಗುಡಿ).—ಒಬ್ಬ ಹರಿಜನರು ಇರಬೇಕೆಂದು Constitution ತಿದ್ದುಪಡಿ ಮಾಡಿ.

ಶ್ರೀ ಆರ್. ಮುನಿಸ್ವಾಮಯ್ಯ.—ನಾವು ಅದಕ್ಕೋಸ್ಕರವಾಗಿಯೇ ನಮ್ಮ ದೇಶದ Public Service Commission ನಲ್ಲಿ ಖಚಿತವಾಗಿ ಒಬ್ಬರು ಹರಿಜನ ಸದಸ್ಯರು ಇರಬೇಕು ಎಂದು ನಿರ್ಣಯವನ್ನು ತಂದಿರುವುದು ಒಂದು ಸಾರಿ Engineer ಮತ್ತು Doctor, Lecturer ಕೆಲಸಗಳಿಗೆ interview ಮಾಡಿದ ಕಾಲದಲ್ಲಿ, Public Service Commission ರವರು ಬಹಳ ತಮಾಷೆಯಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಒಬ್ಬ Engineer graduate, B.Sc., B.E. ಯವರು ಇಂಟರ್‌ವ್ಯೂಗೆ ಬಂದಾಗ 25 ವರ್ಷದ ಹುಡುಗನೊ ಒಬ್ಬನಿಗೆ ತಲೆಯಲ್ಲಿ ಒಂದೆರಡು ಬಿಳೀ ಕೂದಲು ಬಂದಿದ್ದವು. ಆತನನ್ನು ಹಾಗೆ ಬಿಳೀ ಕೂದಲು ನಿಮಗೆ ಏಕೆ ಬಂದಿದೆ ಎಂದು ಪ್ರಶ್ನಿಸಿದರು. That was the only question put to him. He replied : "That is the indication of my wisdom" I am glad ಎಂದು ಹೇಳಿ ಅವನನ್ನು ಕಳಿಸಿ ಕೊಟ್ಟರು. ಅವನಿಗೆ ಇದುವರೆಗೂ ಕೆಲಸ ಕೊಟ್ಟಿಲ್ಲ; ಇನ್ನೂ ಕೆಲಸಕ್ಕೆ ಕಾದಿದ್ದಾನೆ. ಆಮೇಲೆ ಒಬ್ಬ ಹರಿಜನ ಬಿ. ಎ. (ಆನರ್ಸ್) ಮಾಡಿಕೊಂಡು ಇಂಟರ್‌ವ್ಯೂಗೆ ಹೋದಾಗ " You have got a feeble voice" ಎಂದು ಹೇಳಿದರು. ಅವರು ಈಗ M. A. ಮಾಡಿಕೊಂಡು ಹೈಸ್ಕೂಲಿನಲ್ಲಿ ಉಪಾಧ್ಯಾಯನಿಯಾಗಿದ್ದಾರೆ. B. A. (Hons) ಆಗಿದ್ದುದರಿಂದ ಆ ಕಾಲದಲ್ಲಿ ಪ್ರಿಯವಾದ Lecturer ಆಗುತ್ತಿದ್ದರು. ದೂರದೃಷ್ಟಿಯಿಂದ ಇಂತಹ ಪ್ರಶ್ನೆಗಳಿಗೆ ಅವಕಾಶ ಕೊಡಬಾರದು. ಮನಸ್ಸಿನಲ್ಲಿ ಏನೋ ಇಟ್ಟುಕೊಂಡು, ಕೇಳಬಾರದ ಪ್ರಶ್ನೆಯನ್ನು ಕೇಳಿದ್ದರಿಂದ ಅವರು Lecturer ಆಗುವುದನ್ನು ಕಳೆದುಕೊಂಡು ಈಗ ಹೈಸ್ಕೂರ್ ಟೀಚರ್ ಆಗಿದ್ದಾರೆ. ಅವರು ಹೆನರುವಾಸಿಯಾದ ಟೀಚರ್ ಆಗಿದ್ದಾರೆ, ನಮ್ಮ ಸದಸ್ಯರೆಲ್ಲರೂ ಹೋಗಿ ನೋಡಬಹುದು. ಆದ್ದರಿಂದ ನಾನು ಈ ಸಭೆಯ ಮುಂದೆ ಸರ್ಕಾರದವರನ್ನು ಬೇಡಿಕೊಳ್ಳುವುದೇ ನೆಂದರೆ, ಜಾಗ್ರತೆಯಾಗಿ ಒಬ್ಬ ಹರಿಜನ ಸದಸ್ಯರನ್ನು Public Service Commission ನಲ್ಲಿ ನೇಮಕ ಮಾಡುವಂತೆ ಏರ್ಪಾಡು ಮಾಡಬೇಕೆಂದು. ಬಹಳ ಕಾಲದಿಂದ Public Service Commission ಇದೆ. ಅಲ್ಲಿಗೆ ಹರಿಜನ ಸದಸ್ಯರನ್ನು ಕೊಡಬೇಕು ಎಂದು ಅನೇಕ ಸ್ನೇಹಿತರು ನಿರ್ಣಯಗಳನ್ನು ಕಳುಹಿಸಿದ್ದಾರೆ. ಪ್ರಶ್ನೆ ರೀತಿಯಲ್ಲಿಯೂ ಕೇಳಿದ್ದಾರೆ. ಈಗ Commission constitute ಆಗಿದೆ, ಪುನಃ constitute ಮಾಡಿದಾಗ ನೋಡಿಕೊಳ್ಳೋಣ ಎಂದು ಹೇಳುತ್ತಿದ್ದಾರೆ. ಮುಂದೆ reconstitute ಮಾಡುವ ಕಾಲದಲ್ಲಿ ಈ ವಿಚಾರವನ್ನು ಗಮನ ಇಟ್ಟು ಕೊಳ್ಳುತ್ತೇವೆ ಎನ್ನುತ್ತಾರೆ. ಇನ್ನೂ ಅದಕ್ಕೆ ಜೀವದಾನ ಕೊಡಬಹುದು. ಅವರನ್ನೇ ಮುಂದುವರಿಸುತ್ತಾ ಹೋಗಬಹುದು. Reconstitute ಮಾಡುವುದು ಸಾಧುವಾದುದಲ್ಲ ಎಂದು ಬಿಟ್ಟರೂ ಬಡಬಹುದು. ಆದರೆ ರಾಜ್ಯಾಂಗದಲ್ಲಿ ಇಷ್ಟೇ ಸದಸ್ಯರು ಇರಬೇಕೆಂಬ ವಿಧಿ ಏನೂ ಇಲ್ಲ. ಅದಕ್ಕೋಸ್ಕರವಾಗಿ ಈಗಲೂ ಸಹ ಮೈಸೂರು Public Service Commission Regulation ಅನ್ನು ಸ್ವಲ್ಪ ತಿದ್ದುಪಡಿ ಮಾಡಿ ನಾಲ್ಕು ಮಂದಿ ಸದಸ್ಯರು ಇರಬೇಕೆಂದು ಮಾಡುವುದಲ್ಲದೆ ಒಬ್ಬ ಹರಿಜನ ಸದಸ್ಯರನ್ನು ಕೂಡಲೆ ನಾಲ್ಕನೆಯ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಅಷ್ಟೇ ಅಲ್ಲ. ಮೊದಲೇ ಅರಿಕೆ ಮಾಡಿದ ಹಾಗೆ, backward communityಯ ಒಂದೆರಡು ಪಂಗಡಗಳವರೂ ಸಹ ನ್ಯಾಯವಾಗಿ ಈ ಕಮೀಷನ್‌ನನ್ನು ಏನ್ತಾರ ಮಾಡಬೇಕೆಂದು ತಿಳಿನುತ್ತಿದ್ದಾರೆ. ನಾನು ಬೆಂಗಳೂರಿನಲ್ಲಿ ಸಂಚಾರ ಮಾಡಿದ ಕಾಲದಲ್ಲಿ ಅನೇಕ ಕೋಮಿನ ಜನರು backward communityಗೆ ಸೇರಿರತಕ್ಕ ಗಾಣಿಗರು, ನಾಯಿಂದರು, ಅಗಸರು, ಬಾಹುಸಾರ ಕ್ಷತ್ರಿಯರು, ಕುಂಬಾರರು, ಮುನಲ್ಮಾನರು ಮೊದಲಾದವರು ಈಗಿರತಕ್ಕ Public Service Commission ನಿಂದ ಅನ್ಯಾಯವಾಗುತ್ತಿದೆ, ತಮಗೆಲ್ಲ ಒಂದು ರೀತಿಯಲ್ಲಿ ಧಕ್ಕೆಯುಂಟಾಗಿರುತ್ತದೆ ಎಂದು ಹೇಳುತ್ತಾ ಇರುವುದನ್ನು ಕಂಡಿದ್ದೇನೆ. ಆದ್ದರಿಂದ ಹರಿಜನ ಸದಸ್ಯರು Public Service Commission ನಲ್ಲಿರುವ ಪಕ್ಷದಲ್ಲಿ ಉಳಿದಿರತಕ್ಕ backward community ಪಂಗಡಗಳ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲರಿಗೂ ಸಾಕಾದಷ್ಟು ರೀತಿಯಲ್ಲಿ ನ್ಯಾಯವನ್ನು ಒದಗಿಸುತ್ತಾರೆ ಎಂದು ಅವರು ಹೇಳುತ್ತಾ ಇದ್ದಾರೆ. ನಾವು ಡ್ಯಾಪಕ ಮಾಡಿಕೊಳ್ಳುವುದಾದರೆ, ಮೊನ್ನೆ ನುಮಾರು ಒಂದು ವರ್ಷದಿಂದ ಈಚೆಗೆ ಇಂಡಿಯಾ ಪಾರ್ಲಮೆಂಟಿನಲ್ಲಿಯೂ ಈ ವಿಷಯ ಚರ್ಚೆಗೆ ಬಂತು. ಅದು ಚರ್ಚೆಯಾಗಿ ಸಭೆಯ ಒಪ್ಪಿಗೆಯನ್ನೂ ಪಡೆದಿದೆ. ಅದೇ ರೀತಿ ಒಪ್ಪಿಗೆ ಪಡೆದು ಒಬ್ಬ ಹರಿಜನ ಸದಸ್ಯರನ್ನೂ ಸಹ ಯೂನಿಯರ್ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ನೇಮಿಸಿಕೊಂಡಿದ್ದಾರೆ. ಇದೇ ರೀತಿ ಮೈಸೂರು ದೇಶದವರು ಸಹ ನಮ್ಮ ದೇಶದ Public Service Commissionಗೆ ಒಬ್ಬ ಹರಿಜನ ಸದಸ್ಯರನ್ನು ನೇಮಿಸಿಕೊಂಡು ನಮ್ಮ ಹರಿಜನರ ಮತ್ತು ಉಳಿದ ನಿಮ್ನ ವರ್ಗದವರ ಹಿತವನ್ನು ರಕ್ಷಿಸ ಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—Resolution Moved :

"This Assembly is of opinion that a Harijan member be appointed immediately to the Mysore Public Service Commission."

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಹೆಚ್ಚು ಹೇಳಿದಷ್ಟೂ ಕೆಲಸ ಕೆಟ್ಟುಹೋಗುತ್ತದೆಂದು ನಾಯಕರು ಅಪ್ಪಣೆಕೊಡಿಸುತ್ತಾರೆ. ಆದ್ದರಿಂದ ಸಂಕ್ಷೇಪವಾಗಿಯೇ ಹೇಳುತ್ತೇನೆ. ಶ್ರೀಮಾನ್ ಮುನಿಸ್ವಾಮಯ್ಯನವರು ತಂದಿರುವ ಪ್ರಶ್ನೆ ಇಡೀದೇಶದ ಪ್ರಶ್ನೆಯೇ ಹೊರತು ಯಾವುದೇ ಒಂದು ಜನಾಂಗದ ಪ್ರಶ್ನೆಯಲ್ಲ. ನಮ್ಮ ಹರಿಜನರಿಗೆ ಒಂದು ಸ್ಥಾನ ಸಿಕ್ಕಬೇಕೆಂಬ ಉದ್ದೇಶದಿಂದ ತಂದಿರುವುದಿಲ್ಲ. ಈ ವಿಷಯದಲ್ಲಿ ಅವರು ಈಗಾಗಲೇ ಬಹಳ ಸ್ಪಾರಸ್ಯವಾಗಿ ಹೇಳಿದ್ದಾರೆ. ಅಲ್ಲಿ ಈ ಪಂಗಡಕ್ಕೆ ಸೇರಿದವರೊಬ್ಬರಿದ್ದರೆ ಈಗ ಆಗತಕ್ಕ ಅನ್ಯಾಯ ಕಡಮೆಯಾಗಬಹುದೋ ಏನೋ ಎಂಬ ಭಾವನೆಯಿಂದ ಹೀಗೆ ತಂದಿದ್ದಾರೆ. ಅವರೊಬ್ಬರಿದ್ದರೆ ಆಗಲೂ ಅನ್ಯಾಯವಾದರೆ, ಈಗಿರತಕ್ಕವರು ಅದಕ್ಕೆ ಜವಾಬ್ದಾರರಲ್ಲ ಎಂಬ ಭಾವನೆ ಬರುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಹರಿಜನರ ಪ್ರಾತಿನಿಧ್ಯದ ವಿಚಾರವನ್ನು ನಾಲ್ಕು ವರ್ಷಗಳಿಂದಲೂ ಹೇಳುತ್ತಿದ್ದೇವೆ. ಈಗ ನೇಮಕ ಆಗಿಹೋಗಿದೆ, ಮುಂದೆ ನೇಮಕ ಮಾಡುವಾಗ ಪರಿಶೀಲನೆ ಮಾಡುತ್ತೇವೆ, ಹರಿಜನರಿಗೆ ಖಂಡಿತ ಪ್ರಾತಿನಿಧ್ಯಕೊಡುತ್ತೇವೆ, ಒಂದು ಸ್ಥಾನವನ್ನು ಮೀಸಲಾಗಿಡುತ್ತೇವೆ ಎಂದು ಹೇಳಿದರು. ಶ್ರೀಮಾನ್ ಅರಸಿನವರು ಹೇಳಿದಹಾಗೆ ಉಪ್ಪು ಪಪ್ಪಿಯ ನೀತಿಯನ್ನನುಸರಿಸಿಕೊಂಡು ಬರುತ್ತಿದ್ದಾರೆ. ಅನ್ಯಾಯವಾಗುತ್ತಿದೆ ಎಂದು ನಿರ್ದಿಷ್ಟವಾಗಿ ಹೇಳುತ್ತಿದ್ದೇವೆ. ಈ ವಿಷಯವನ್ನು ಪರಿಶೀಲನೆಮಾಡಿ ಕೇಂದ್ರ ಸರ್ಕಾರದವರು ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಒಬ್ಬರನ್ನು ನೇಮಕಮಾಡಿಕೊಂಡಿದ್ದಾರೆ. ನಿಬಂಧನೆಗಳನ್ನು ನೋಡಿ ತೀರ್ಮಾನಮಾಡುವಾಗ, ಹರಿಜನರೊಬ್ಬರು ಇದ್ದರೆ, ಹರಿಜನರ ಜನಸಂಖ್ಯೆಯನ್ನು ನೋಡಿಕೊಂಡು ಅವರ ಹಿತವನ್ನು ನೋಡಿಕೊಳ್ಳುತ್ತಾರೆಂದು ಹಾಗೆ ನೇಮಕಮಾಡಿದ್ದಾರೆ. ಇಲ್ಲಿ ನಮಗೇನೂ ಎರಡು ಮೂರು ಸ್ಥಾನಗಳು ಬೇಡ, ಇಂಥವರಿಗೇ ಕೊಡಿ ಎಂದೂ ಹೇಳುವುದಿಲ್ಲ. ಕಾಂಗ್ರೆಸ್ಸಿನವರಲ್ಲದಿರುವವರಿಗೆ ಕೊಡಿ ಎಂದು ಶ್ರೀಮಾನ್ ಚನ್ನಿಗರಾಮಯ್ಯನವರು ಹೇಳುತ್ತಿದ್ದರು. . . . .

ಶ್ರೀ ಆರ್. ಚನ್ನಿಗರಾಮಯ್ಯ (ಮಧುಗಿರಿ-ಕೊರಟಗೆರೆ-ಅನುಸೂಚಿತ ಜಾತಿಗಳು).—ನಾನು ಯಾವಾಗ ಹಾಗೆ ಹೇಳಿದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಹರಿಜನರಿಗೆ ಬಹು ಮುಖವಾಗಿ ಅನ್ಯಾಯವಾಗುತ್ತಿದೆ. ಕೇಳಿದಾಗಲೆಲ್ಲಾ ಅವರು ವಿಷಯವನ್ನು ಹೇಳಿದ್ದಾರೆ. ಅನೇಕ ಉಮೇದುವಾರರಿಗೆ, ಫಸ್ಟ್ ಕ್ಲಾಸ್‌ನಲ್ಲಿ ಪಾಸುಮಾಡಿದವರಿಗೆ ಅಲ್ಲಿ ನಾನಾ ಪ್ರಶ್ನೆಗಳನ್ನು ಹಾಕಿ, ಮುಖಮುರಿದು, ಅವರು ನಾಲಾಯಕ್ಕು ಎಂದು ಮಾಡಿದ್ದಾರೆ. ಬುದ್ಧಿವಂತರನ್ನು ಕೂಡ ಆ ರೀತಿ ಮಾಡಿದ್ದಾರೆ, ಮಾಡುತ್ತಿದ್ದಾರೆ.

Sri K. HANUMANTHAIYA (Chief Minister).—May I point out, Sir, that the allegations are of very serious nature ? He said that though a candidate was otherwise intelligent and had obtained good marks, the members of the Public Service Commission discouraged him by putting all sorts of questions. This is a very serious allegation. I would like to know the instances so that we may forward these for the opinion of the Public Service Commission.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮೊನ್ನೆತಾನೆ ಐನೂರು 'ಸಿ' ಕ್ಲಾಸ್ ವೇಕೆನ್ಸಿಗಳನ್ನು ಪ್ರಕಟಣೆ ಮಾಡಿದ್ದರು. ಅದಕ್ಕೆ ಅರ್ಜಿಹಾಕಿದವರಿಗೆ, ಆ ಸರ್ಟಿಫಿಕೇಟಿಲ್ಲ, ಈ ಸರ್ಟಿಫಿಕೇಟಿಲ್ಲ ಎಂದು ಅನೇಕರಿಗೆ ಕೊಡಲಿಲ್ಲ. ಹೀಗಾದುದು ನಮ್ಮ ಗಮನಕ್ಕೆ ಬಂದಿದೆ. ಆ ಉಮೇದುವಾರರೂ ಇತರ ಪ್ರಜೆಗಳೂ ನಮ್ಮ ಗಮನಕ್ಕೆ ತಂದಿದ್ದಾರೆ. ನಮ್ಮ ಪ್ರತಿನಿಧಿ ಅಲ್ಲಿದ್ದರೆ ಇಂಥಾದ್ದು ಆಗುವುದಿಲ್ಲ ಎಂಬ ನಂಬಿಕೆ ಇರುತ್ತದೆ. ಇದರಿಂದ ಒತ್ತಾಯ ಮಾಡುತ್ತಿದ್ದೇವೆ.

Sri K. HANUMANTHAIYA.—I would like to have instances wherein injustice has been done so that we may also take notice of it.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದ ಗಮನಕ್ಕೆ ತರಬಹುದಾಗಿತ್ತು ; ಆದರೆ ಕಾನೂನಿಗನುಸಾರವಾಗಿ ಮಾಡುತ್ತಿದ್ದಾರೆ, ಸರ್ಕಾರ ನಿರ್ದಿಷ್ಟವಾದ ಕಾನೂನು ಮಾಡಿದಮೇಲೆ ಅದರಂತೆ ನಡೆಯುತ್ತಾರೆಂಬ ಭಾವನೆ ಇತ್ತು, ಅದರಿಂದ ತರಲಿಲ್ಲ. ಇನ್ನುಮೇಲೆ ಅವರ ಗಮನಕ್ಕೆ ತರುತ್ತೇವೆ. ನಡ್ಯಕ್ಕೆ ನಮ್ಮ ಮುಂದೆ ಬಂದಿರುವ ನಿರ್ಣಯದಲ್ಲಿ ಯಾವ ವಿಚಾರವನ್ನೂ ಕೊಟ್ಟಿಲ್ಲ. ಹೊಸ ನಿಬಂಧನೆಗಳನ್ನು ಮಾಡಿ, ಈಗಿನ ನಿಬಂಧನೆಗಳನ್ನು ಬದಲಾವಣೆ ಮಾಡಿ ಪಬ್ಲಿಕ್‌ಸರ್ವಿಸ್ ಕಮಿಷನ್ನಿನಲ್ಲಿ ನಮ್ಮವರು ಒಬ್ಬರಿರುವಂತೆ ಮಾಡಬೇಕು. ಜನಸಂಖ್ಯೆಯ ಪ್ರಕಾರ ನಮ್ಮ ಹರಿಜನರು ಎರಡನೆಯ ಜನಾಂಗವಾಗುತ್ತಾರೆ. ಅಲ್ಪಸಂಖ್ಯೆಯ ಜನಾಂಗಕ್ಕೂ ಅನುಕೂಲ ಮೊರಕುತ್ತದೆಂಬ ಕಾರಣದ ಮೇಲೆ ಕೂಡಲೆ ನಿಬಂಧನೆಗಳನ್ನು ಬದಲಾವಣೆ ಮಾಡಿ ಹರಿಜನರನ್ನು ತೆಗೆದುಕೊಳ್ಳುತ್ತಾರೆಂಬ ನಂಬಿಕೆ ಇದೆ. ಈ ಬಗ್ಗೆ ಸರ್ಕಾರದ ಭರವಸೆ ಈಗಲೇ ಮೊರಕ ಬೇಕೆಂದು ಹೇಳಿ ಇದನ್ನು ಸಮರ್ಥಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ ಅಧ್ಯಕ್ಷರೆ, ಈ ನಡೆಯ ಮುಂದೆ ಈ ನಿರ್ಣಯ ಪದೇಪದೇ ಬರುತ್ತಲೇ ಇದೆ. ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷ್ಷ ರಚನೆ ಮಾಡುವುದಕ್ಕೆ ಮುಂಚೆಯೇ ಇದನ್ನು ಮಾಡಬೇಕಾಗಿತ್ತು, ಮಾಡಲಿಲ್ಲ. ಇನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದಾಗ, ಕಾಲ ಬಂದಾಗ ಮಾಡುತ್ತೇವೆ, ಆಗ ನಿಮ್ಮ ಜನರೊಬ್ಬರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಆ ಕಾಲ ಮುಗಿದುಹೋಗಿದೆ. ಕೊಟ್ಟರೆ ಈಗ ಕೊಡಬೇಕು, ಇಲ್ಲದಿದ್ದರೆ ಇಲ್ಲವೇಇಲ್ಲ. ಮುಖ್ಯಮಂತ್ರಿಗಳು ನೂರಕ್ಕೆ ಹದಿನೆಂಟು ಜನರಿಗೆ ಕೆಲಸ ಸಿಕ್ಕಿದೆ ಎಂದು ಹೇಳುತ್ತಾರೆ. ಆದರೆ ಯಾವಾಗ ಗೆಜಿಟ್ಟಿನಲ್ಲಿ ಬಂದರೂ ಈ ಶೇಕಡ 18 ಇರುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಗೆಜೆಟೆಡ್ ಮತ್ತು ನಾಕ್ ಗೆಜೆಟೆಡ್ ನೌಕರಿಗಳನ್ನು ಭರ್ತಿಮಾಡಲು ಪ್ರಕಟಿಸುವಾಗ ಹರಿಜನರಿಗೆ ಎಷ್ಟೆಷ್ಟು ಕೊಡಬೇಕಾಗುತ್ತದೆಯೋ ಎಂದು ನಾಲ್ಕಿದ್ದರೆ ಮೂರನ್ನೇ ಮಾಡುತ್ತಾರೆ, ಮೂರಿದ್ದರೆ ಎರಡನ್ನೇ

(ಶ್ರೀ ಸಿ. ಟಿ. ಹನುಮಂತಯ್ಯ.)

ಮಾಡುತ್ತಾರೆ, ಹೀಗೆ ಮಾಡುತ್ತಿದ್ದಾರೆ. ಅಲ್ಲಿ ಹರಿಜನರ ಪ್ರತಿನಿಧಿ ಇಲ್ಲದಿರುವ ಕಾರಣ ಹೀಗಾಗಿದೆ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಹೆಚ್ಚು ಜನರಿರುವವರಿಗೂ ಅನ್ಯಾಯವಾಗುತ್ತಿದೆ ಎಂದು ತಿಳಿದುಕೊಂಡೂ ಏಕೆ ನುಮ್ಮನಿರುತ್ತೀರೆಂದು ನಮ್ಮನ್ನು ಕೇಳುತ್ತಾರೆ. ತಾಯಿಯು ಮಗುವು ಅತ್ತರೆ ಹಾಲು ಕೊಡುತ್ತಾಳೆಯೇ ಹೊರತು ಇಲ್ಲದಿದ್ದರೆ ಕೊಡುವುದಿಲ್ಲ. ನುಮ್ಮನೆ ಒಳ್ಳೆಯಮಾತು ಹೇಳಿದರೆ ಪ್ರಯೋಜನವಿಲ್ಲ. ಗಾಣಿಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಗುವುದಿಲ್ಲ. ನಾವು ಒಂದು ಸ್ಥಾನವನ್ನು ಕೊಡುತ್ತೇವೆ ಎಂದು ಭರವಸೆ ಕೊಟ್ಟರೆ ಸಂತೋಷವಾಗುತ್ತದೆ. ಇದುವರೆಗೆ ಅನೇಕ ಸಂದರ್ಭಗಳಲ್ಲಿ ಮಾಡಿರುವ ಹಾಗೆ ಮಾಡಿದರೆ, ಇಪ್ಪತ್ತು ಲಕ್ಷ ಜನ ಸಂಖ್ಯೆ ಇರುವವರು ಹೀಗೆಯೇ ಇರುತ್ತಾರೆ. ಇನ್ನೆಷ್ಟು ದಿವಸವಾದರೂ ನಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುತ್ತದೆ. ನಮ್ಮ ಪಂಗಡದವರು ಇದುವರೆಗೆ ಯಾರೂ ಡೆಪ್ಯುಟಿ ಕಮೀಷನರಾಗಿಲ್ಲ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಏನೋ ಒಬ್ಬರಿಗೆ ಮಂತ್ರಿ ಸ್ಥಾನ ಕೊಟ್ಟಿದ್ದಾರೆ. ಹಾಗೆಯೇ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿಯೂ ಒಂದು ಸ್ಥಾನವಿದ್ದರೆ ನಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬಾರದೇಯಿರುವ ಹಾಗೆ ನಡೆದುಕೊಳ್ಳುತ್ತಾರೆ. ಅವರು ಆ ಸ್ಥಾನಕ್ಕೆ ಬಂದಮೇಲೂ ಅನ್ಯಾಯವಾದರೆ ಅವರನ್ನು ಕೇಳಲು ಮಾರ್ಗವಿರುತ್ತದೆ. ಆದುದರಿಂದ ನಾನು ಈ ಸಭೆಯ ಮೂಲಕ, ಈ ನಿರ್ಣಯದ ಮೂಲಕ, ಖಚಿತವಾಗಿ ಹೇಳುವುದಾದರೆ, ಈ ಸಾರಿ ಕೊಡುತ್ತೇವೆಂದು ಭರವಸೆ ಕೊಡಬೇಕು. ಈ ಮುಖ್ಯಮಂತ್ರಿಗಳ ಕಾಲದಲ್ಲೇ ಇದು ಆಗಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹರಿಯೂರು–ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಮುನಿಸ್ವಾಮಯ್ಯನವರು ತಂದಿರುವ ಈ ನಿರ್ಣಯವನ್ನನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸ್ವಾಮಿ, ಸಾಧಾರಣವಾಗಿ ಹರಿಜನರ ಸಮಸ್ಯೆ ನೂರಾರು, ಸಾವಿರಾರು ವರ್ಷಗಳಿಂದಲೂ ಬಂದಿರುವ ಸಮಸ್ಯೆ. ಬಹುಕಾಲದಿಂದಲೂ ವಿದ್ಯಾಭ್ಯಾಸವಿಲ್ಲದೆ, ಸರ್ಕಾರಿ ನೌಕರಿಯಿಲ್ಲದೆ ಹಿಂದುಳಿದುಕೊಂಡು ಇತರ ಜನರ ಜೀವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಇತ್ತೀಚೆಗೆ ಮಹಾತ್ಮಾ ಗಾಂಧಿಯವರೂ ಇತರ ನಾಯಕರೂ ಸಹಕಾರ ಸಹಾಯ ನೀಡಿದುದರ ಫಲವಾಗಿ ಹರಿಜನರ ವಿದ್ಯಾಭ್ಯಾಸ ಮುಂದೆ ಬಂದಿದೆ. ಸರ್ಕಾರಕ್ಕಾಗಲಿ ಇತರ ಜನರಿಗಾಗಲಿ ಹರಿಜನರ ವಿಷಯದಲ್ಲಿ ಏಕೆ ನಂಬಿಕೆ ಬರಲಿಲ್ಲವೋ ಗೊತ್ತಿಲ್ಲ. ಇವರು ಕೆಲಸ ಮಾಡಲಾರರೆ? ನಮ್ಮವರಿಗೇ ಮೂರು ಸ್ಥಾನಗಳನ್ನೂ ಕೊಟ್ಟು ಬಿಡಿ; ಏಕ ಕೆಲಸ ಸರಿಯಾಗಿ ನಡೆಯುವುದಿಲ್ಲ ನೋಡೋಣ. ನೂರಾರು ವರ್ಷಗಳಿಂದ ಏನು ಅನುಭವ ಬಂದಿದೆಯೋ ಅದು ಸಾಲದೆ? ದೇಶದಲ್ಲಿ ಐದನೆಯ ಒಂದು ಭಾಗ ಇರುವ ಜನರಿಗೆ ಈ ರೀತಿ ಮಾಡಬಾರದು. ಹಿಂದೆ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ನಮ್ಮ ಜನರು ಮಂತ್ರಿ ಕೆಲಸ ಡೆಪ್ಯುಟಿ ಕಮಿಷನರ ಕೆಲಸ ಮಾಡುವವರು ಯಾರಿದ್ದಾರೆ ಎಂದು ಕೇಳಬಹುದಾಗಿತ್ತು. ಆದರೆ ಈಗ ಯಾವ ಕೆಲಸವನ್ನು ಮಾಡುವುದಕ್ಕೂ ದಕ್ಷರಾಗಿರುವವರು ನಮ್ಮ ಜನರಲ್ಲಿದ್ದಾರೆ. ಆದುದರಿಂದ ಸರ್ಕಾರದವರು ದೊಡ್ಡ ಮನಸ್ಸುಮಾಡಬೇಕು. ಮಹಾತ್ಮಾ ಗಾಂಧಿಯವರ ತತ್ವದಮೇಲೆ ಸರ್ಕಾರ ನಡೆಯುತ್ತಿದೆ. ಹಿಂದೆ ಅವರು ಎಲ್ಲಿಹೋದರೂ ಹರಿಜನರ ಕೇರಿಗೇ ಹೋಗಿ ಅಲ್ಲಿ ಉಳಿಯುತ್ತಿದ್ದರು. ಹರಿಜನರನ್ನು ನೇಮಕಮಾಡಿ. ಏಕೆಂದರೆ, ಈ ಹೊತ್ತಿನವರೆಗೂ ಇತರರು ದೊಡ್ಡ ದೊಡ್ಡ ಸ್ಥಾನಗಳಲ್ಲಿದ್ದುಕೊಂಡು ಸುಖಸಂಪತ್ತಿನಿಂದ ಬೆಳೆದುಕೊಂಡು ಒಂದಿದ್ದಾರೆ. ಕೆಳಗೆ ಬಿದ್ದಿರುವ ಈ ಸಹೋದರರು, ನಿಮ್ಮ ಜೊತೆಯಲ್ಲಿದ್ದುಕೊಂಡು ಕೆಲಸಮಾಡುತ್ತಾ ಬಂದಿದ್ದಾರೆ. ಇಂಥವರಿಗೆ ಈಗ ಸಹಾಯ ಮಾಡುವುದು ಒಳ್ಳೆಯದು.

2 P.M.

ಇಷ್ಟೇ ಅಲ್ಲದೆ, ಈ ಹೊತ್ತು ನಮ್ಮವರು ಬೇಕಾದಷ್ಟು ಜನ ಗ್ರಾಜ್ಯುಯೇಟ್, ಅಂಡರ್ ಗ್ರಾಜ್ಯುಯೇಟ್ರುಗಳಾಗಿ ಕೆಲಸವಿಲ್ಲದೆ ಇದ್ದಾರೆ. ಏನೋ ಸರ್ಕಾರದವರು ಹಿಂದಿನಿಂದಲೂ ಹರಿಜನರು ವಿದ್ಯಾವಂತರಾಗಲಿ ಎಂದು ಬೋಧನೆ ಮಾಡುತ್ತಿದ್ದಾರಲ್ಲಾ ಎಂದು ತಿಳಿದು, ಹೇಗೋ ಹೊಟ್ಟೆಗಿಲ್ಲದೆ, ಜಮೀನಿಲ್ಲದೆ ಸರ್ಕಾರದ ಅಲ್ಪ ಸಹಾಯವನ್ನು ಪಡೆದು ಇತರರ ಸಹಾನುಭೂತಿಯಿಂದ ಕಷ್ಟವಾದರೂ ಪ್ರಯತ್ನಪಟ್ಟು ಓದಿ ಸರ್ಕಾರದಲ್ಲಿ ಈಗ ಕೆಲಸಮಾಡೋಣವೆಂದು ಮುಂದೆ ಬಂದರೆ, ಈಗ ಕೆಲಸವಿಲ್ಲ! ಎಲ್ಲ ಕೆಲಸಗಳೂ ದೊಡ್ಡ ದೊಡ್ಡ ಮಂತ್ರಿಗಳ ಮಕ್ಕಳಿಗೆ, ಅವರ ಮಗಳನ್ನು ಮದುವೆಯಾದ ಸಂಬಂಧೀಕರಿಗೆ ಹಂಚಿಕೆಯಾಗುತ್ತಿದೆ. ನಮಗೆ ಏನೂ ಇಲ್ಲ. ಶೇಕಡಾವಾರು ಸಂಖ್ಯೆಯನ್ನು ತೆಗೆದುಕೊಳ್ಳುವುದಾದರೆ, ನಮ್ಮವರ ಜನಸಂಖ್ಯೆ 1/5ರಷ್ಟಿದೆ. ಇವರಲ್ಲಿ ಎಷ್ಟೋ ಜನ ಗ್ರಾಜ್ಯುಯೇಟ್ರುಗಳಾಗಿ ಕೆಲಸವಿಲ್ಲದೆ ಕಾಫಿ ಬೋರ್ಡಿನಲ್ಲಿ ಕೂಡ ಸೇರಿಕೊಂಡಿದ್ದಾರೆ. ಆದ್ದರಿಂದ ನಿಜವಾಗಿಯೂ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ನಮ್ಮವರೊಬ್ಬರನ್ನು ನೇಮಿಸಿಕೊಟ್ಟರೆ ನಮ್ಮ ಅಭಿವೃದ್ಧಿಗೆ ಬಹಳ ಸಹಾಯ ಮಾಡಿದಂತಾಗುತ್ತದೆ. ಅದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ನಮ್ಮ ಗಳಮೇಲೆ ನಿಮಗೆ ಅನುಮಾನವಿದ್ದರೆ ಒಮ್ಮೆ ನಮ್ಮನ್ನು ಆ ಸ್ಥಾನಕ್ಕೆ ನೇಮಿಸಿ ನೋಡಿ. ನಾವು ಸರಿಯಾಗಿ ಕೆಲಸಮಾಡುತ್ತೇವೆಯೇ ಇಲ್ಲವೇ ಎಂಬುದನ್ನು ನೀವೇ ತಿಳಿದುಕೊಳ್ಳುತ್ತೀರಿ. ಆದ್ದರಿಂದ ಖಂಡಿತವಾಗಿಯೂ ನಮ್ಮವರೊಬ್ಬರಿಗೆ ಈ ಕಮಿಷನ್ನಿನಲ್ಲಿ ಅವಕಾಶ ಮಾಡಿಕೊಡಬೇಕಾದುದು ಅಗತ್ಯವೆಂದು ಹೇಳುತ್ತೇನೆ.

*ಶ್ರೀ ಬಿ. ರಾಜಯ್ಯ (ಯಳಂದೂರು–ಅನುಸೂಚಿತ ಜಾತಿಗಳು).—ಶ್ರೀ ಮುನಿಸ್ವಾಮಯ್ಯನವರು ತಂದಿರುವ ತಕ್ಕ ನಿರ್ಣಯವನ್ನು ನಮರ್ಥಿಸುತ್ತಾ, ಈ ಮಾನ್ಯ ಸಭೆಯ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಬಯಸುತ್ತೇನೆ. ಇದನ್ನು ಹೇಳಿದ ಮಾತ್ರಕ್ಕೇ ನನಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಲ್ಲಿರತಕ್ಕ ನದನ್ಯರ ಮೇಲೆ ಅಪನಂಬಿಕೆಯೇ ಎಂಬ ಪ್ರಶ್ನೆ ಉದ್ಭವಿಸಬಹುದು. ಎರಡನೆಯದಾಗಿ ಕೋಮುವಾರು ಆಧಾರದಮೇಲೆ ಪಬ್ಲಿಕ್ ಸರ್ವಿಸ್ ಕಮಿಷನ್ನನ್ನೂ ರಚಿನುವುದಾದರೆ ಅದಕ್ಕೆ ಇತಿಮಿತಿಯಿಲ್ಲದ ಹಾಗಾಗುತ್ತದೆಂದು ಸರ್ಕಾರದವರು ಉತ್ತರ ಕೊಡುತ್ತಾರೆಂದು ನಾನು ಊಹಿಸಿದ್ದೇನೆ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಈಗೇನೂ ಜಾತಿಯ ಆಧಾರದಮೇಲೆ ಚುನಾವಣೆ ಮಾಡಿಕೊಂಡಿಲ್ಲ, ಆದರೂ ಈಗ ಕಾರ್ಯನುಲಲಿತವಾಗಿ ನಡೆಯುತ್ತಿಲ್ಲವೇ? ಕಮಿಷನ್ನಿನಲ್ಲಿ ಹರಿಜನರ ಸದಸ್ಯರೊಬ್ಬರು ಇದ್ದೇ ಇರಬೇಕೇ? ಎಂದು ಕೇಳಬಹುದು.

ಶ್ರೀ ಎ. ಭೀಮಪ್ಪನಾಯಕ್ (ಹೊಳಕಾಲ್ಮೂರು).—ಜಾತ್ಯಾಧಾರದ ಮೇಲೆ ಮಾಡಿಲ್ಲವೆಂದು ಯಾರು ಹೇಳಿದರು ?

ಶ್ರೀ ಬಿ. ರಾಚಯ್ಯ.—ದೇಶಕ್ಕೆ ಸಲ್ಲಿಸಿರತಕ್ಕಂಥ ಸೇವೆ ಮತ್ತು ದಕ್ಷತೆಯನ್ನು ಪರಿಗಣನೆಗೆ ತೆಗೆದು ಕೊಂಡು ಈ ಕಮಿಷನ್ನಿನವರನ್ನು ಆರಿಸಿಕೊಂಡಿದ್ದೇವೆ, ಕೋಮುವಾರು ತತ್ವದಮೇಲೆ ಆರಿಸಿ ಕೊಂಡಿಲ್ಲವೆಂದು ಒಂದು ಪ್ರಶ್ನೆಗೆ ಉತ್ತರಕೊಟ್ಟಿದ್ದನ್ನು ಹೇಳುತ್ತಿದ್ದೇನೆ. ಕೋಮುವಾರು ಭಾವನೆಯಲ್ಲದೆ ಬೇರೆ ಯಾವುದಾದರೂ testನ್ನೇನಾದರೂ ಮಾಡಿ ಅವರನ್ನು ಚುನಾವಣೆ ಮಾಡಿದ್ದೀರಾ ? ಅವರಿಗಿಂತಲೂ ದಕ್ಷರಾದಂಥವರು ಹೆಚ್ಚಿಗೆ ಸೇವೆ ಸಲ್ಲಿಸಿದ್ದ ಜನರು ಮೈಸೂರು ದೇಶದಲ್ಲಿ ಇರಲಿಲ್ಲವೇ ? ಹಾಗಿದ್ದರೂ ಕೂಡ ಈ ಎರಡೇ ಕೋಮುಗಳಿಂದೇಕೆ ಆರಿಸಿ ಕೊಂಡಿದ್ದೀರಿ ? ಆ ಕೋಮಿನವರು ಪ್ರಬಲರಾಗಿದ್ದ ರಿಂದಲ್ಲವೇ ? ಅದರಲ್ಲೂ ಆ ಕೋಮಿನಲ್ಲಿ ಒಬ್ಬ ಪ ಬಲರಾಗಿದ್ದವರನ್ನೇ ಆರಿಸಿಕೊಂಡಿದ್ದೀರಿ ! ಹೀಗಿರುವಾಗ ಮೈಸೂರು ದೇಶದಲ್ಲಿ ಹಿಂದುಳಿದ ಜನಾಂಗದವರು ಒಟ್ಟು ಜನಸಂಖ್ಯೆಯಲ್ಲಿ 1/5 ಭಾಗದಷ್ಟಿದ್ದರೂ ಅವರ ಹಿತವನ್ನು ಕಾಪಾಡುವವರಾಗಿ ಅವರಿಗೆ ನ್ಯಾಯ ದೊರಕಿಸಿಕೊಡುವುದಕ್ಕಾಗಿ ಹರಿಜನರೊಬ್ಬರನ್ನು ನೇಮಿಸಿಕೊಳ್ಳಲೆಂದು ಹೇಳುವುದರಲ್ಲಿ ತಪ್ಪೇನು ? ''ಈಗಿರತಕ್ಕ ಪಬ್ಲಿಕ್ ಸರ್ವಿಸ್ಸಿನಿಂದ ಏನು ಅನ್ಯಾಯವಾಗುತ್ತಿದೆ; ಸರ್ಕಾರದವರು ಕಾನೂನು ಕಟ್ಟಳೆಗಳನ್ನು ಮಾಡಿ ನಿಮ್ಮ ತರಗತಿಯವರಿಗೆಲ್ಲಾ ಕೆಲವು ಸ್ಥಾನಗಳನ್ನು ಮೀಸಲು ಮಾಡಿದೆ; ಆದ್ದರಿಂದ ಅನ್ಯಾಯವಾಗುವುದಕ್ಕೆ ಕಾರಣವೇ ಇಲ್ಲ'' ಎಂದು ಹೇಳಬಹುದು. ಆದರೆ ನಮ್ಮನ್ನೆ ಆರೋಪಣೆ ಮಾಡುವುದಕ್ಕೆ ಬದಲಾಗಿ ನಿರ್ದಿಷ್ಟವಾಗಿ ಕೆಲವು ಉದಾಹರಣೆಗಳನ್ನು ಕೊಟ್ಟು ತಮ್ಮ ಕಾನೂನು ಕಟ್ಟಳೆಗಳು ಯಾವ ರೀತಿ ನಡೆಯುತ್ತಿವೆಯೆಂಬುದನ್ನು ಹೇಳುತ್ತೇನೆ.

ಆಹಾರದ ಇಲಾಖೆಯಲ್ಲಿ ರಿಟ್ರೆಂಚ್ ಮಾಡಲ್ಪಟ್ಟಂಥ officialಗಳನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಹೇಳಿ ಒಂದು ಪಟ್ಟಿಯನ್ನು ಮಾಡಿ ಎಲ್ಲಾ ಇಲಾಖೆಗಳಿಗೂ ಒಂದು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಪಟ್ಟಿಯನ್ನು ನೋಡುವುದಾದರೆ, ನಿಮ್ಮ ತರಗತಿಯ ನೌಕರರು ಜಾಸ್ತಿ ಸರ್ವಿಸ್ಸನ್ನು ಮಾಡಿ ಇತರರಿಗೆ ಇರತಕ್ಕ ಅರ್ಹತೆಗಳನ್ನೆಲ್ಲಾ ಹೊಂದಿದವರಾಗಿದ್ದರೂ ಅವರಿಗೆ ನ್ಯಾಯವಾಗಿ ದೊರಕಬೇಕಾದ ಸ್ಥಾನಗಳನ್ನು ಆ ಪಟ್ಟಿಯಲ್ಲಿ ದೊರಕಿಸಿಕೊಟ್ಟಿಲ್ಲದಿರುವುದನ್ನು ಕಾಣಬಹುದು. ನಿಮ್ಮ ತರಗತಿಯವರಿಗೆ ಶೇಕಡ 18ರಷ್ಟು ಸ್ಥಾನಗಳನ್ನು ಕೊಡಬೇಕೆಂದು ನಿರ್ದೇಶವೊಂದಿದ್ದರೂ ಸಾಮಾನ್ಯವಾಗಿ ದೊರಕಬೇಕಾದ ಈ ನ್ಯಾಯ ದೊರಕಿಲ್ಲ. ಇವರಿಗಿಂತ ಕಡಮೆಯಾಗಿ ಕೇವಲ ಎರಡು-ಮೂರು ವರ್ಷಗಳು ಮಾತ್ರ ಸರ್ವೀಸ್ ಮಾಡಿರುವವರಿಗೆ ಮುಂತೆ ಮುಂಚೆಯೇ ಸ್ಥಾನಗಳನ್ನು ಕೊಟ್ಟು ಹತ್ತು-ಹನ್ನೊಂದು ವರ್ಷ ಸರ್ವೀಸ್ ಮಾಡಿದ ನಮ್ಮ ಪಂಗಡದವರಿಗೆ 25-26 ನೆಯ ಸ್ಥಾನಗಳನ್ನು ಕೊಟ್ಟಿದ್ದಾರೆ.

ಒಬ್ಬ ಸದಸ್ಯರು.—ನೀವು ಹೇಳುವುದನ್ನು ಮುಖ್ಯ ಮಂತ್ರಿಗಳು ಕೇಳುತ್ತಿಲ್ಲ.

ಶ್ರೀ ಬಿ. ರಾಚಯ್ಯ.—ಯಾವಾಗ ನಿದರ್ಶನಗಳನ್ನು ಹೇಳುತ್ತೇನೋ ಆಗ ಅವರು ಕೇಳಿಸಿಕೊಳ್ಳುವುದಿಲ್ಲ.

ಇನ್ನೊಂದು ನಿದರ್ಶನ ಹೇಳುವುದಾದರೆ, ಅಸಿಸ್ಟೆಂಟ್ ಎಂಜಿನಿಯರುಗಳನ್ನು ತೆಗೆದುಕೊಂಡಿರುವ ವಿಚಾರ ಹೇಳುತ್ತೇನೆ. ಇದು ಸ್ಥಾನಗಳನ್ನು ಮೀಸಲಾಗಿಟ್ಟಿದ್ದರು, ಅದಕ್ಕೆ ಎರಡು ಅರ್ಜಿಗಳು ಮಾತ್ರ ಬಂದುವೆಂದು ಹೇಳಿದರು. ಆ ಅರ್ಜಿಗಳು ಬರುತ್ತಲೇ ಅವರು ಈಗತಾನೆ ಪಾಸ್‌ಮಾಡಿದವರು; ಪಾಸು ಮಾಡಿ ಬಂದಾಕ್ಷಣ ಗೆಜೆಟೆಡ್ ಹುದ್ದೆಯನ್ನು ಕೊಡುವುದೇ ಎಂದು ಹೇಳಿದ್ದಾರೆ. ಈ ರೀತಿ ಇವರಿಗೊಬ್ಬರಿಗೇ ಗೆಜೆಟೆಡ್ ಹುದ್ದೆಯನ್ನು ಕೊಟ್ಟಿಲ್ಲ. ಇತರಕೋಮಿನವರನ್ನು ಪ್ರೊಬೇಷನರಾಗಿ ತೆಗೆದುಕೊಳ್ಳುವಾಗಲೂ ಇದೇ ರೀತಿಯ ಸೌಲಭ್ಯವನ್ನು ಕೊಟ್ಟಿದ್ದಾರೆ. ಬೇರೆಯವರಿಗಿಲ್ಲದ ಸೌಲಭ್ಯವನ್ನು ಇವರಿಗೆ ಮಾತ್ರ ಕೊಡಿರೆಂದು ನಾನು ಹೇಳುತ್ತಿಲ್ಲ. ತುಮಕೂರಿನಲ್ಲಿ ಒಮ್ಮೆ ಹಿಂದಿದ್ದ ಚೀಫ್ ಜಸ್ಟಿಸ್‌ರವರು ಮಾತನಾಡುವಾಗ ಹೇಳಿದ ಒಂದು ಮಾತನ್ನು ಅಷ್ಟು ಪ್ರಕೃತವಲ್ಲದಿದ್ದರೂ ಹೇಳುತ್ತೇನೆ. ಅವರು ಭಾಷಣ ಮಾಡುತ್ತಾ, ನಮಗೆ ಇಷ್ಟವಿರಲಿ ಇಲ್ಲದಿರಲಿ ನಿಮ್ಮ ತರಗತಿಯವರಿಗೆ ಸ್ಥಾನಗಳನ್ನು ಕೊಡಬೇಕಾಗಿದೆಯೆಂದು ಹೇಳಿದರು. ಈ ಮಾತುಗಳನ್ನು ಕೇಳಿದರೆ ನಿಮ್ಮ ತರಗತಿಯವರೂ ದಕ್ಷರಾಗಿದ್ದಾರೆ, ಅವರಿಗೆ ಕೆಲಸ ಕೊಟ್ಟರೆ ನಿಬಾಯಿಸಿಕೊಂಡು ಹೋಗಬಲ್ಲರೆಂಬ ನಂಬಿಕೆ ಕೂಡ ಅವರಿಗೆ ಬಂದಿಲ್ಲವಲ್ಲ ಎಂದು ನಮಗೆ ವ್ಯಥೆಯಾಯಿತು. ಇನ್ನೂ ಅವರು ಕೆಂಪುಬಣ್ಣದ ಗಾಜಿನಲ್ಲೇ ನೋಡುತ್ತಿದ್ದಾರಲ್ಲ ಎಂದು ನಾವು ವಿಷಾದಿಸುತ್ತೇವೆ. 18 ಜನ ಪ್ರೊಬೇಷನರುಗಳನ್ನು ತೆಗೆದುಕೊಂಡರೆ, cycle of appointments ಪ್ರಕಾರ ಯಾವ ಸ್ಥಾನ ಕೊಡಬೇಕಾಗಿತ್ತೋ ಆ ಸ್ಥಾನವನ್ನು ಕೊಡದೆ ನಮ್ಮ ಜನರಿಗೆ 17-18ನೆಯ ಜಾಗಗಳನ್ನು ಕೊಟ್ಟಿದ್ದಾರೆ. ಹಿಂದೆ ಅಸಿಸ್ಟೆಂಟ್ ಎಂಜಿನಿಯರುಗಳನ್ನು ತೆಗೆದು ಕೊಳ್ಳುವಾಗಲೂ ನಮ್ಮವರಿಗೆ ಕೊನೆಯ Rank ಗಳನ್ನು ಕೊಟ್ಟಿದ್ದಾರೆ. ಹೀಗೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳುವುದರಲ್ಲೇ ಆಗಲಿ, ನಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದರಲ್ಲೇ ಆಗಲಿ, ಅಲ್ಲಿ ಹರಿಜನ ಸದಸ್ಯರೊಬ್ಬರಿದ್ದರೆ ಅನುಕೂಲವೆಂಬುದನ್ನು ತಾವುಗಳು ಒಪ್ಪದೆ ಹೋದರೆ ಇನ್ಯಾವ ರೀತಿಯಲ್ಲಿ ನಾವು ನ್ಯಾಯ ದೊರಕಿಸಿಕೊಳ್ಳುವುದು ? ಈ ದೃಷ್ಟಿಯಿಂದ ಅಂಥ ಪ್ರಮುಖ ಸ್ಥಾನದಲ್ಲಿ ನಮ್ಮವರಾಗಿ ಒಬ್ಬರನ್ನು ನೇಮಕ ಮಾಡಿಕೊಳ್ಳುವುದು ಅಗತ್ಯವೆಂದು ಹೇಳಿ ನಾನು ಒತ್ತಾಯಮಾಡುತ್ತೇನೆ. ಶೇಕಡ 18 ರಷ್ಟು ರಿಸರ್ವೇಷನ್ ಮಾಡಿಯೇನೋ ನಾನಾ ಇಲಾಖಾ ಯೂನಿಟ್‌ಗಳಿಗೆ ಕಳುಹಿಸಿಕೊಡಬಹುದು. ಹಾಗೆ ಕಳುಹಿಸಿಕೊಟ್ಟಮೇಲೆ ಸರ್ಕಾರಿ ಹುಕುಮಿನಲ್ಲಿ ನಿರ್ದೇಶಿಸಿರುವ ಪ್ರಕಾರ ನೇಮಕ ಮಾಡಿದ್ದಾರೆಯೇ ಇಲ್ಲವೇ ಎಂದು ಆಗಿಂದಾಗ್ಗೆ review ಮಾಡಲು ರಿಪೋರ್ಟ್‌ಗಳನ್ನೇನಾದರೂ ತರಿಸಿಕೊಂಡಿದ್ದೀರಾ ? ನಾನು ಈ ನಾಲ್ಕು ವರ್ಷಗಳಿಂದ ಈ ಬಗ್ಗೆ ಒಂದು ಪ್ರಶ್ನೆಯನ್ನು ಈ ಸಭೆಗೆ ಕಳುಹಿಸಿಕೊಡುತ್ತಿದ್ದೇನೆ. ಪ್ರತಿ ಸಲವೂ ಅದಕ್ಕೆ ಉತ್ತರವಾಗಿ, ನಿಮ್ಮ ಪ್ರಶ್ನೆಗೆ ಉತ್ತರ ಒದಗಿಸುವುದಕ್ಕೆ ಪಡಬೇಕಾದ ಶ್ರಮಕ್ಕೆ ತಕ್ಕಷ್ಟು ಲಾಭ ದೊರಕುವುದಿಲ್ಲವಾದುದರಿಂದ ಉತ್ತರ ಒದಗಿಸಿಲ್ಲವೆಂದು ಹೇಳುತ್ತಿದ್ದಾರೆ. ಹೀಗಾಗಿ ನಮಗೆ ಅಂಕಿ ಅಂಶಗಳು ದೊರಕದೆ ನಮ್ಮ ಹುಡುಗರು ಬಂದು ಆಗಿರುವ ಅನ್ಯಾಯಗಳನ್ನು ಹೇಳುವುದನ್ನು ಖುದ್ದಾಗಿ ಕೇಳಿ ನಿಮ್ಮ ಮುಂದೆ ಹೇಳುತ್ತಿದ್ದೇವೆ. ಹಾಗೆ ಆಗುತ್ತಾ ಇಲ್ಲ ಎಂದು ಹೇಳುವುದಾದರೆ ಸರ್ಕಾರದವರು ಅಂಕಿ ಅಂಶ ಕೊಟ್ಟು ಅವರೇ ನಮರ್ಥಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಪಾರವಾಗಿ ಹಿಂದುಳಿದಿರತಕ್ಕ ಈ ಜನಗಳ ಹಿತದೃಷ್ಟಿಯಿಂದ ಈ ಹರಿಜನ ಸದಸ್ಯರನ್ನು

(ಶ್ರೀ ಬಿ. ರಾಚಯ್ಯ.)

ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ತೆಗೆದುಕೊಳ್ಳಲು ಸರ್ಕಾರದವರು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಹೇಳಿ ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

*Sri J. MOHAMED IMAM (Jagalur).—It is my sacred duty to support the resolution brought forward by my friend Sri Muniswamiah. This is not the first time that such a resolution has been moved before this House. Previously similar resolutions were moved which evoked unanimous sympathy in this House. On previous occasions various drawbacks that are now existing were brought to the notice of this House and the Hon'ble Minister at that time promised that he would take a sympathetic view. It is heart-rending to see that member after member of this aggrieved party is getting up and representing to Government that justice has not been done to the community, that their claims have been ignored and that their claims are not receiving as sympathetic a consideration as they ought to. Sir, we are all interested in the uplift of the Scheduled Castes who admittedly require every treatment that would lead to their improvement. We swear by them, we invoke their aid and help at moments when we most need them. But it is rather disheartening to see that in spite of repeated promises of the Government their claims have not been recognised and that they have not been treated as sympathetically as possible, as they ought to have been treated. Sir, I must state on this occasion that everything that the Public Service Commission does is not satisfactory and this is not the first time that grievances have been ventilated against the working of the Public Service Commission and against the procedure adopted by them. Sir, previously I tabled some questions: whether the Public Service Commission is guided by any rules, whether any rules have been framed for their guidance and if those rules have been approved by this House. When any person or group of persons hold a responsible position and when the fate of thousands of people depend upon their actions, it is common practice and it is necessary that their actions are bound by rigid rules. And then it is also necessary that these members follow those rules scrupulously. But, Sir, I regret very much to say that though years have passed no rules have been framed for their guidance. I would like to elicit from the Government or from the Hon'ble the Chief Minister if there are any rules well set which guide them, which bind them to adopt any particular course of action, because if there areany set of rules they cannot evade them. Here I know it is a lapse or an omission on the part of the Government that they have not framed any rules. That is the reason why I am afraid the Public Service Commission is open to the charge that it is adopting a dictatorial course. Instances are not wanting where discriminatory attitude has been brought to the notice of this House. I think a year or two ago an interpellation was tabled before this House regarding the principle adopted by the Public Service Commission in selecting probationers in the Public Works Department and it was revealed there in that out of 30 nearly 15 probationers belonged to a particular group or community. And this was brought to the notice of the Government and I think I asked under what rules or what principles. . . .

Sri K. HANUMANTHAIYA.—May I point out that it is difficult to answer when this is converted into an occasion for the purpose of a general debate on services? If the Hon'ble Member brings these questions at proper time for answering we will certainly put forward the case of the Government. But now this has become a general debate and it would not be fair for anybody to go on the lines the Hon'ble Member suggests.

Sri J. MOHAMED IMAM.—I am only stressing the need to have a member from the Scheduled Castes who require most sympathetic consideration.

Sri K. HANUMANTHAIYA.—Under that colour he is having his own way

and he wants to have a dig at the Government.

Sri J. MOHAMED IMAM.—No, I am not having any dig at the Government. I am only pointing out that the Government have failed to frame a set of rules for the guidance of the Public Service Commission. This is being brought to the notice of the Government not now but ever since the Public Service Commission was appointed.

Sri H. M. CHANNABASAPPA (Minister for Industries).—The question before the House is appointment of a Harijan member on the Public Service Commission and not the working of the Public Service Commission.

Sri J. MOHAMED IMAM.—That is, in the absence of rules it is necessary to have a representative of Harijans on the Public Service Commission. (*Laughter*).

Sri Mulka GOVINDA REDDY (Chitaldrug).—If the Public Service Commission is not working according to a set of rules, if that is a fact, the Government can answer whether they are working under any rules or working arbitrarily.

Sri K. HANUMANTHAIYA.—They are working according to rules.

A MEMBER.—Rules provide for 18 per cent representation of Harijans in appointments.

Sri J. MOHAMED IMAM.—If the rules provide that 18 per cent of the vacancies must go to the members of the Harijan community, where then is the trouble? The very fact that members of the Harijan community have brought to the notice of the Government that their claims are being ignored shows that there are no such rules and what is more those rules must be approved by this House.

Sri K. HANUMANTHAIYA.—They have been approved. The Hon'ble Member has forgotten probably.

A MEMBER.—Probably no opportunity was given for us to debate on the rules.

Sri H. K. VEERANNA GOWDH (Maddur).—Copies of the report were placed probably and no debate was raised thereon.

Sri K. HANUMANTHAIYA.—The Hon'ble Leader of the Opposition has been mentioning that. We have great respect for his judgment and sobriety. He must get himself informed before he makes any allegations. And all of us are aware that in order to guarantee fair treatment in the matter of appointments this power was specifically taken away from the Ministers everywhere in India and entrusted to the Public Service Commission. And if Hon'ble Members go on making reckless allegations against the Public Service Commission, its authority and prestige will suffer; and even if they commit any mistake it must be pointed out to them. In all fairness you must give them opportunity to state what they have got to state with reference to a particular question. Here several Hon'ble Members are making allegations of unfair treatment and putting questions unfairly. These are hardly the words that could be used with reference to an independent authority that has been created under the Constitution. The rules were drafted as per the provisions of the Constitution and we placed them before this House and they were circulated to every member and in spite of it if the Hon'ble the Leader of the Opposition says 'I am not aware of that' and goes on making criticisms, I for one say that such an argument would not be in keeping with the reputation he has earned in this House.

Sri J. MOHAMED IMAM.—My only submission is this, Sir. If there is a set of rules submitted to this House and the Public Service Commission really follow those rules strictly and scrupulously, there is no room for criticism. I would like to know what is the percentage reserved for the Harijans and if these rules provide for any such reservation and whether that percentage has been adhered to in respect of Harijans. I am not concerned with other communities for the time being. I do not know when these rules were framed. All that I know is that the Public Service Commission has been appointed and it is functioning in the State. I know that even its appointment was delayed

(SRI J. MOHAMED IMAM.)

for years because the rules had to be framed. If these rules have been subsequently framed, I will express my opinion when I will get those rules.

Mr. SPEAKER.—I learn that the Report on the working of the Public Service Commission was also published. There you will find facts and figures.

***Sri H. M. CHANNABASAPPA.**—I would like to submit that under article 309 it is provided as follows :

"Until provision in this behalf is made by the Rajpramukh or the appropriate legislature under this article, any rules in force shall have effect subject to the provisions of this Constitution."

The Rajpramukh has powers to frame the rules for the working of the Public Service Commission until rules are framed by the Legislature. I may tell the Hon'ble Member that the rules have been framed by the Rajpramukh and they are in force. These rules were also placed on the Table of the House. If the Hon'ble Member has not got a copy of these rules, I shall be very glad to furnish him with a copy.

Sri J. MOHAMED IMAM.—So, Sir, I submit that the request by the Harijan members of this Assembly that there should be a Member belonging to their community on the Public Service Commission requires sympathetic consideration, because such an act will be in accordance with equity and justice.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ನಮ್ಮ ಮುಂದೆ ಇರತಕ್ಕ ನಿರ್ಣಯ "ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್ ಮಂಡಲಿಗೆ ಕೂಡಲೇ ಒಬ್ಬರು ಹರಿಜನ ಸದಸ್ಯರನ್ನು ನೇಮಕ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ" ಎಂದು. ಇದೇ ರೀತಿಯ ನಿರ್ಣಯವನ್ನು ಮಾನ್ಯ ಸಭೆಯ ಸದಸ್ಯರಾದ ಶ್ರೀಮಾನ್ ಬಿ. ಟಿ. ಕೆಂಪರಾಜ್‌ರವರು 1954ನೆ ಇಸವಿಯ ಅಕ್ಟೋಬರು ಅಧಿವೇಶನದಲ್ಲಿ ಇಟ್ಟಿದ್ದರು. ಇದು ಒಂದೆರಡು ಸಲ, ಈ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇದುವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಕುತೂಹಲದಿಂದ ಕೇಳಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಮಂಡಳಿಯಲ್ಲಿ ಪ್ರಮುಖ ಪಂಗಡಗಳಿಗೆ ಮಾತ್ರ ಅವಕಾಶ ಕೊಟ್ಟಿದ್ದಾರೆ, ಇನ್ನೂ ಉಳಿದ ಅನೇಕ ಪಂಗಡಗಳಿವೆ, ಅವುಗಳಲ್ಲಿ ಬಹು ಪ್ರಾಮುಖ್ಯವಾದ ಹರಿಜನ ಪಂಗಡಕ್ಕೆ ಒಂದು ಸ್ಥಾನ ಕೊಡಬೇಕು, ಎನ್ನುವುದು ಒಂದು ವಾದ. ಈಗಿರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಪ್ರಮುಖ ಪಂಗಡಗಳಿಗೆ ಮಾತ್ರ ಅವಕಾಶ ಕೊಟ್ಟಿದೆ ಯಾದುದರಿಂದ ನಮಗೆ ನ್ಯಾಯ ದೊರಕುತ್ತಿಲ್ಲ ಎನ್ನುವುದು ಎರಡನೆಯ ವಾದ. ಈಗ ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್ ರೆಗ್ಯುಲೇಷನ್ ಪ್ರಕಾರ ಅದರಲ್ಲಿ ಮೂರು ಜನಗಳಿಗೆ ಮಾತ್ರ ಅವಕಾಶ ಏರ್ಪಟ್ಟಿದೆ. ಇದರಲ್ಲಿ ಹರಿಜನರ ಅಭಿವೃದ್ಧಿಯ ವಿಷಯದಲ್ಲಿ ಈ ಸಭೆಯ ಮಾನ್ಯ ಸದಸ್ಯರಿಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅದರ ಅಭಿವೃದ್ಧಿ ಸರ್ವತೋಮುಖವಾಗಿ ಆಗಬೇಕು ಎನ್ನುವುದನ್ನು ಎಲ್ಲರೂ ಮನಸ್ಸಿನಲ್ಲಿಟ್ಟು ಅವರ ವಿಷಯ ಬಂದಾಗ್ಗೆ ಈ ಸಭೆಯ ಮಾನ್ಯ ಸದಸ್ಯರಾಗಲಿ, ಸರ್ಕಾರದವರಾಗಲಿ ಸಾಧ್ಯವಾಷ್ಟು ಮಟ್ಟಿಗೂ ಎಲ್ಲರೂ ಬಹಳ ಸಹಾನುಭೂತಿಯಿಂದ ವರ್ತನೆ ಮಾಡಿಕೊಂಡು ಬಂದಿದ್ದಾರೆ. ಮುಂದೆಯೂ ಕೂಡ ಅದರ ಅಭಿವೃದ್ಧಿಯನ್ನು ಸಾಧನೆ ಮಾಡುವುದರಲ್ಲಿ ಸರ್ಕಾರದವರು ಹಿಂತೆಗೆಯುವುದಿಲ್ಲ. ಆದರೆ ಎಲ್ಲ ವಿವರಗಳೂ ತಯಾರಾಗಿ ಒಂದು agreed proposals ಪ್ರಕಾರ, ಎಂದರೆ, ನಾವೇ ಕಲೆತು, ಕುಳಿತು ಯೋಚನೆ ಮಾಡಿ ಒಂದು ವಿಧದ ಪ್ರಕಾರ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ಹರಿಜನರು ಒಂದು ಸಭೆಯಲ್ಲದ್ದರೆ ಮಾತ್ರ ಅವರ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬರುವುದಿಲ್ಲ, ಹಾಗಿಲ್ಲದಿದ್ದರೆ ಬರುತ್ತದೆ ಎನ್ನುವ ಮನೋಭಾವ ಸರಿಯಲ್ಲ. ಒಂದು ವೇಳೆ ಹರಿಜನ ರೊಬ್ಬರನ್ನು ಸದಸ್ಯರನ್ನಾಗಿ ಮಾಡುವ ವಿಷಯ ದಲ್ಲಿ ಭಿನ್ನಾಭಿಪ್ರಾಯವಿರುವುದಿಲ್ಲ. ಯಾವುದಾದರೂ ಒಂದು ಜಾತಿಯ ಜನ, ಒಂದು ಕೋಮಿನ ಜನ ಸದಸ್ಯರಾಗಿದ್ದರೆ ಆ ಕೋಮಿನ ಹಿತವನ್ನು ಸಂರಕ್ಷಣೆ ಮಾಡುವುದಕ್ಕೆ ಸಾಧ್ಯ, ಇಲ್ಲದೆ ಇದ್ದರೆ ಸಾಧ್ಯವಿಲ್ಲ ಎನ್ನುವ approach ಸರಿಯೇ ಎಂಬುದನ್ನು ನಾನು ತಮ್ಮ ಅಭಿಪ್ರಾಯಕ್ಕೆ ಬಿಡುತ್ತೇನೆ.

ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಮೂರು ಜನರಿರಬೇಕು, ನಾಲ್ಕು ಜನರಿರಬೇಕು, ಐದು ಜನರಿರಬೇಕು ಎನ್ನುವುದು ನಮಗೆ ಬಿಟ್ಟಿದ್ದು ಮತ್ತು ರಾಜಪ್ರಮುಖರಿಗೆ ಬಿಟ್ಟಿದ್ದು. ಇದರಲ್ಲಿ ಮೂರು ಜನರಿರುವುದನ್ನು ಐದು ಜನರನ್ನು ಮಾಡಬಹುದು, ಆರು ಜನರನ್ನು ಮಾಡ ಬಹುದು, ಹತ್ತು ಜನರನ್ನು ಬೇಕಾದರೂ ಮಾಡ ಬಹುದು. ಅದು ರಾಜಪ್ರಮುಖರ ವಿವೇಚನೆಗೆ ಮತ್ತು ಸರ್ಕಾರದ ಸಲಹೆಗೆ ಬಿಟ್ಟಿದ್ದು ಮತ್ತು ಈ ಮಾನ್ಯ ಸಭಾ ಸದಸ್ಯರ ಅಭಿಪ್ರಾಯಕ್ಕೆ ಒಳಪಟ್ಟಿದ್ದು. ಏನು ಮಾಡಿದರೂ ಎಲ್ಲ ಕೋಮುಗಳ ಹಿತವನ್ನೂ ಕೂಡ ಸಂರಕ್ಷಣೆ ಮಾಡುವ ರೀತಿಯಲ್ಲ, ಎಲ್ಲರಿಗೂ ಒಂದು ಪ್ರಾಧಾನ್ಯತೆಯನ್ನೂ, ಒಂದು ಸ್ಥಾನವನ್ನೂ ಕೊಡುವುದು ಸಾಧ್ಯವಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಲೇ ಬೇಕು.

ಶ್ರೀ ಎ. ಭೀಮಪ್ಪನಾಯಕ್.—ಒಂದು ಪ್ರಶ್ನೆಗೆ ಉತ್ತರ ಬೇಕಾಗಿದೆ. ಈಗ ನೇಮಿಸಿರುವುದನ್ನು ಕೋಮುವಾರು ಭಾವನೆಇಲ್ಲದೆ ಆಯಾ ಕೋಮಿನ ಪ್ರಾತಿನಿಧ್ಯವನ್ನೇ ಮುಂದೆ ಇಟ್ಟುಕೊಳ್ಳದೆ ನೇಮಿಸಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಆ ವಿಷಯ ನಮಗೆ ಗೊತ್ತಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಯಾವುದಕ್ಕೆ ಏನು ಉದ್ದೇಶ ಬೇಕಾದರೂ ಕಲ್ಪನೆ ಮಾಡಿಕೊಳ್ಳಬಹುದು. ಆದನ್ನೇ ಮತ್ತೊಂದು ದೃಷ್ಟಿಯಿಂದ ನೋಡಿದರೆ ಸರಿಯಾಗಿದೆ ಎಂದು ತಿಳಿದು ಕೊಳ್ಳಬಹುದು. ಈ ರೀತಿ ಯಾವತ್ತೋ ನೇಮಕವಾ

ಗಿರತಕ್ಕ ಒಂದು ನಂಸ್ಥೆಯನ್ನು ನಾವು ನಾನಾ ದೃಷ್ಟಿಗಳಿಂದ ಅಲ್ಲಗಳೆಯುತ್ತ ಹೋಗುವುದು ಸಾಧುವೂ, ಉಚಿತವೂ ಅಲ್ಲವೆಂದು ಪದೇ ಪದೇ ಪ್ರಾರ್ಥಿಸುತ್ತಿದ್ದೇನೆ. ಈಗ ದುರದೃಷ್ಟವಶಾತ್ ವಾತಾವರಣ ಹೀಗಾಗಿದೆ. ಯಾವ ಮೆಂಬರಾದರೂ ಸಹ ಒಂದು ಕೋಮಿಗೆ ಸೇರಿರಲೇಬೇಕು. ಒಂದು ಕೋಮಿನವರು ಸೇರಿದ ತಕ್ಷಣ ಏನಾದರೂ ಒಂದು ಆರೋಪಣೆ ಮಾಡುವುದಕ್ಕೆ ಅವಕಾಶವಾಗುತ್ತಿದೆ. ಅದು ಕೊನೆ ಮೊದಲಿಲ್ಲದ ಆರೋಪಣೆ, ಪ್ರತ್ಯಾರೋಪಣೆಯಾಗುತ್ತಿದೆ. ನಾನು ಹೇಳಬೇಕಾದರೆ, ಹಿಂದೆ ಈ (ಕಮಿಷ್) ಮಂಡಳಿಯನ್ನು ನೇಮಕ ಮಾಡಿದಾಗ ಯಾರನ್ನೇ ನೇಮಕ ಮಾಡಲಿ ಯಾವುದಾದರೂ ಒಂದು ಕೋಮಿನ ಹಿತವನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಲಿಲ್ಲ. ಎಲ್ಲ ಕೋಮಿನವರ ಹಿತರಕ್ಷಣೆಯನ್ನೂ ಮಾಡುವುದಕ್ಕೆ ನೇಮಿಸಿದ್ದಾರೆಂದು ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಅದೆಲ್ಲ ನಿಜ. ಅದರಂತೆಯೇ ಹರಿಜನರು ತಮ್ಮ ಹಿತರಕ್ಷಣೆಯಾಗುವುದಕ್ಕೆ ಕೇಳುವುದರಲ್ಲಿ ತಪ್ಪು ಏನಿದೆ.

ಶ್ರೀ ಕೆ. ಹನುಮಂತಯ್ಯ.—ತಪ್ಪೇನೂ ಇಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹರಿಜನರ ಪ್ರಾತಿನಿಧ್ಯವಿರಬೇಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ಏನು ತಂದಿದ್ದಾರೆಯೋ ಅದರಲ್ಲಿ ತಪ್ಪು ಏನೂ ಇಲ್ಲ. ಅವರ ಅಭಿವೃದ್ಧಿ ವಿಷಯದಲ್ಲಿ ಸರ್ಕಾರದವರು ತೀವ್ರವಾದ ಆಸಕ್ತಿಯನ್ನುಳ್ಳವರಾಗಿದ್ದಾರೆ. ಇದರಲ್ಲಿ ಒಂದು ವೇಳೆ ಹರಿಜನ ಸದಸ್ಯರನ್ನು ನೇಮಕ ಮಾಡಿದೆವು ಎಂದು ಇಟ್ಟುಕೊಳ್ಳೋಣ. ಅದರಿಂದಲೇ ನಮಗೆ ಇರತಕ್ಕ ಸಮಸ್ಯೆಗಳೆಲ್ಲವನ್ನೂ ಬಗೆಹರಿಸುತ್ತಿದ್ದೇವೆಯೇ ಎಂಬುದು ಯೋಚಿಸತಕ್ಕ ವಿಷಯ. ಈಗ ಯಾರೋ ಮೂರು ಜನರು ಯಾವುದೋ ಕೋಮಿನವರು ಇದ್ದಾರೆ ಎಂದ ಮಾತ್ರಕ್ಕೇ ಆಯಾ ಕೋಮಿನವರಿಗೆ ಮಾತ್ರ ಹಿತರಕ್ಷಣೆ ದೊರೆಯುತ್ತಿದೆ ಎಂಬ ಅಭಿಪ್ರಾಯವಿಲ್ಲ. ಅದರಲ್ಲಿ ಒಕ್ಕಲಿಗರು, ಲಿಂಗಾಯಿತರು ಮತ್ತು ಕ್ರಿಶ್ಚಿಯನರಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಒಕ್ಕಲಿಗರು ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಇದ್ದಾರೆಂದ ಮಾತ್ರಕ್ಕೆ ಎಲ್ಲ ಒಕ್ಕಲಿಗರೂ ಸಂತೃಪ್ತಿ ಪಟ್ಟಿದ್ದಾರೆಯೇ! ಹಾಗೆಯೇ ಲಿಂಗಾಯಿತ ಮತ್ತು ಕ್ರಿಶ್ಚಿಯರ್ ಕೋಮಿನವರೂ ಸಹ ಎಲ್ಲರೂ ಸಂತೃಪ್ತಿ ಪಟ್ಟಿಲ್ಲ. ಇದರಲ್ಲಿ ನಾನು ಅರಿಕೆ ಮಾಡತಕ್ಕದ್ದು ಏನೆಂದರೆ, ಎಲ್ಲರ ಹಿತವನ್ನೂ ಕಾಯತಕ್ಕ ಜನರನ್ನು, ಸತ್ಯವಂತರನ್ನು, ನೀತಿವಂತರನ್ನು ಮತ್ತು ಸತ್ಯ ಮತ್ತು ನೀತಿಗೆ ಅನುಗುಣವಾಗಿ ಕೆಲಸ ಮಾಡತಕ್ಕ ಯೋಗ್ಯರನ್ನು ನಾವು ಕಮಿಷನ್ನಿಗೆ ನೇಮಕಮಾಡಿ, ವಿಧಾಯಕವಾದ ರೂಲ್ಸು, ಕಾನೂನು, ಇವುಗಳಿಗನುಗುಣವಾಗಿ ಕೆಲಸ ಮಾಡಬೇಕು ಎಂದು ಹೇಳುವುದು ನರಿಯಾದ ಮಾರ್ಗ.

2-30 P.M.

ಈ ಸಂದರ್ಭದಲ್ಲಿ ಒಂದುವೇಳೆ ಆ ರೀತಿಯಲ್ಲಿ ಹರಿಜನರನ್ನೇ ನೇಮಕ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಮಾಡುವುದಿಲ್ಲವೆಂದು ತಾವೇಕೆ ತಿಳಿದುಕೊಳ್ಳಬೇಕು. ಒಂದೇ ದಿವಸದಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಮಾನ್ಯಸದಸ್ಯರು ಒಪ್ಪಿಕೊಳ್ಳಬೇಕು. ನಾವು ಹಿಂದುಳಿದ ಹರಿಜನರನ್ನು ಮುಂದಕ್ಕೆ ತರಬೇಕು, ಎಂದು ರಾಜ್ಯಾಂಗದಲ್ಲೇ ಒಪ್ಪಿಕೊಂಡಿರುವಾಗ, ಅವರ ಅಭಿವೃದ್ಧಿಯನ್ನು ಯಾವಯಾವ ರೀತಿಯಲ್ಲಿ ಯಾವಯಾವ ಮಾರ್ಗದಲ್ಲಿ ಮಾಡಬೇಕು, ಯಾವರೀತಿ ಅವರನ್ನು ಉತ್ತಮ ಸ್ಥಿತಿಗೆ ತರಬೇಕು, ಹೇಗೆ ಅವರಿಗೆ ಉತ್ತೇಜನ ಕೊಡಬೇಕು ಎಂಬ ನೀತಿಯನ್ನು ಒಪ್ಪಿಕೊಂಡಿರುವಾಗ, ಈಗ ಈ ತರಹ ನಿರ್ಣಯಕ್ಕೆ ಅವಕಾಶವಿಲ್ಲ, ಅದರಲ್ಲೂ ಈಗಿರುವ ರೀತಿಯಲ್ಲಿ ಈ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಇರತಕ್ಕ ವಿಷಯವನ್ನು ತಮ್ಮ ಗಮನಕ್ಕೆ ತಂದಿದೆ. ಹರಿಜನರಿಗೆ ಒಂದು ಸ್ಥಾನವನ್ನು ಕೊಡಬೇಕೆಂಬ ವಿಷಯವನ್ನು ತಾವು ಅನೇಕಸಾರಿ ಈ ಸಭೆಯ ಮುಂದೆ ಒತ್ತಾಯ ಮಾಡಿದ್ದೀರಿ. ಸರ್ಕಾರದವರೂ ಕೂಡ ಹರಿಜನರ ಅಭಿವೃದ್ಧಿಗೆ ಏನೇನು ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡಿದ್ದಾರೆ. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟು ಕಾಲಾನುಗುಣ್ಯವಾಗಿ ಯಾವರೀತಿ ಮಾಡಬೇಕೆಂಬುದನ್ನು ಯೋಚಿಸಿ ತಮ್ಮ ಬೇಡಿಕೆಯನ್ನು ಸಾಧಿಸಲು ಪ್ರಯತ್ನಮಾಡೋಣ. ಈ ಸಂದರ್ಭದಲ್ಲಿ ಮಾನ್ಯಸದಸ್ಯರು ಪಬ್ಲಿಕ್ ಸರ್ವಿಸ್ ಕಮಿಷನ್ ಕೆಲಸ ಮಾಡತಕ್ಕ ರೀತಿ ನೀತಿಯನ್ನೆಲ್ಲಾ ಹೇಳಿದರು. ಅದು ವಿಧಾಯಕವಾದ ರೀತಿಯಲ್ಲ ಮಾಡುವ ಕೆಲಸವನ್ನು ಮಾಡಲೇಬೇಕು. ಹಾಗಿಲ್ಲದಿದ್ದರೆ ಈ ಸಭೆಯ ಸದಸ್ಯರು ಚರ್ಚೆಮಾಡಿ ತಿಳಿಸಲು ಅವಕಾಶವಿದೆ. ಮಾನ್ಯಸದಸ್ಯರಾದ ಇಪ್ಪಾರವರು ರೂಲ್ಸ್‌ಗಳೇ ಇಲ್ಲದೆ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಬಹುಶಃ ಇನ್ಯಾರಿಂದಲಾದರೂ ಆ ಮಾತು ಬಂದಿದ್ದರೆ ಪರವಾಗಿರಲಿಲ್ಲ. ಮಾನ್ಯಸದಸ್ಯರು ಅನೇಕ ದಿವಸಗಳಿಂದಲೂ ನಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಿರುವಾಗ ರೂಲ್ಸ್ ಇಲ್ಲದೆ ಕೆಲಸ ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ರೂಲ್ಸ್ ಎಲ್ಲ ಗೆಜೆಟ್ಟಿನಲ್ಲಿ ಪ್ರಕಟವಾಗಿವೆ. ಆ ರೂಲ್ಸ್‌ಗಳಿಗನುಗುಣವಾಗಿ ವಿಧಿ ನಿಯಮಗಳಿಗನುಸಾರವಾಗಿ ಕೆಲಸಕಾರ್ಯ ನಡೆಯುತ್ತಿದೆಯೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಏಲ್ಲ, ಸಂಶಯವೂ ಇಲ್ಲ. ಕೆಲವರಿಗೆ ಕೆಲಸ ಸಿಕ್ಕುತ್ತದೆ, ಕೆಲವರಿಗೆ ಸಿಕ್ಕುವುದಿಲ್ಲ, ಸಿಕ್ಕದಿರುವವರು ಏನಾದರೂ ಒಂದು ಕಾರಣ ಹೇಳಿ ಆರೋಪ ಮಾಡುವುದು ಸ್ವಾಭಾವಿಕವಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—"Every first vacancy must be given to a Scheduled Caste candidate; and the sixth vacancy must be given to a Scheduled Caste." ಎಂದು ಪೊನ್ನೆತಾನೆ ಪಾಸ್‌ಮಾಡಿರುವ ಗವರ್ನ್‌ಮೆಂಟ್ ಆರ್ಡರಿನ ಪ್ರಕಾರ ಪ್ರೊಮೋಷನರುಗಳನ್ನು ತಗೆದುಕೊಳ್ಳುವಾಗ ಮೊದಲನೆಯ ವೇಕೆನ್ಸಿಯನ್ನು ಹರಿಜನರಿಗೇ ಕೊಡಬೇಕೆಂದು ಸರ್ಕಾರದವರು ತಿಳಿಸಿದ್ದಾರೆಯೆ?

Sri H. M. CHANNABASAPPA.—I have already stated that we are going out of the scope of the resolution and are discussing the working of the Public Service Commission. We are discussing about the appointment of a Harijan member to the Public Service Commission; that is the issue before us now and not the working of the Public Service Commission. ಒಂದುವೇಳೆ ಆ ರೀತಿ ಈಗಿರತಕ್ಕ ವಿಧಿ ನಿಯಮಗಳಿಗನುಗುಣವಾಗಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಕೆಲಸ ಮಾಡಿಲ್ಲವೆಂದು ಕಂಡು ಬಂದರೆ ಅದನ್ನು ಹೇಳುವುದಕ್ಕೆ ಬೇಕಾದಷ್ಟು ಅವಕಾಶವಿದೆ, ಚರ್ಚೆಮಾಡಿ ನರಿಯಾಗಿ ಕೆಲಸ ಮಾಡದಿರುವುದನ್ನು ಸಿದ್ಧಾಂತ ಮಾಡಿದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ನಾವು ಯೋಚಿಸಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದಕ್ಕೆ ಕಾಲ ಬರುತ್ತದೆ; ಆಗ ನಾವೇ ತೆಗೆದುಕೊಳ್ಳುತ್ತೇವೆ.

Sri H. M. CHANNABASAPPA.—I am now only drawing the attention of Hon'ble Members to the question that is now before us. I should like to submit that we have absolutely no objection to look at this question in an objective manner. At the proper time Government will look into the feelings ventilated by Hon'ble Members. With this assurance I hope the Hon'ble Member will kindly withdraw his resolution.

Mr. SPEAKER.—I want to bring it to the notice of the House that Public Service Commission Rules were placed and moved by Sri Kadidal Manjappa and they were accepted by this House in 1953.

Now, what does the Hon'ble Member propose to do with his resolution?

ಶ್ರೀ ಆರ್. ಮುನಿನ್ಯಾಮಯ್ಯ.—ಭರವಸೆ ಕೊಟ್ಟಿರುವ ರೀತಿಯಲ್ಲಿ ಜಾಗ್ರತೆ ರೂಲ್ಸ್ ತಿದ್ದುಪಡಿಮಾಡಿ ತೆಗೆದುಕೊಳ್ಳುತ್ತಾರೆ ಎಂಬ ಭರವಸೆಯಿಂದ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave withdrawn.

Mr. SPEAKER.—Next resolution; Sri T. G. Thimme Gowda.

No. (3.) Grant of Loan to Tiptur Market Committee, to construct a Building to accommodate Merchants, Offices and Shops.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ :—

> "ವರ್ತಕರಿಗೂ, ಆಫೀಸುಗಳಿಗೂ ಮತ್ತು ಅಂಗಡಿಗಳಿಗೂ ಸ್ಥಳಾವಕಾಶವನ್ನೇರ್ಪಡಿಸಲು ಒಂದು ಕಟ್ಟಡವನ್ನು ಕಟ್ಟಲು ತಿಪಟೂರು ಮಾರ್ಕೆಟ್ ಸಮಿತಿಯವರಿಗೆ ಕೂಡಲೆ ಕನಿಷ್ಟ ಪಕ್ಷ ಐದು ಲಕ್ಷ ರೂಪಾಯಿಗಳನ್ನಾದರೂ ಮಂಜೂರ್ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, 1948 ನೆಯ ಇಸವಿಯಲ್ಲಿ ತಿಪಟೂರಿನಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿಸಲು ಸರ್ಕಾರದವರು 28 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರು ಮಾಡಿದರು. ಅದರ ಪ್ರಕಾರ ಸರ್ಕಾರದವರು ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸಂಬಂಧದಲ್ಲಿ ವರ್ತಕರಿಗೆ ಮಳಿಗೆಗಳನ್ನು ಮತ್ತು ಆಫೀಸಿಗೆ ಕಟ್ಟಡವನ್ನೂ ಕಟ್ಟಿಸಿಕೊಡಲು ಮಂಜೂರಾತಿಯನ್ನಿತ್ತರು. ಆದರೆ ಆ ಯೋಜನೆ ಪ್ರಕಾರ ಕೆಲಸ ಕಾರ್ಯಗತವಾಗಿಲ್ಲ. ಈಗ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸರ್ಕಾರದವರು 56 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡು ಮಾರ್ಕೆಟ್ ಸಮಿತಿಯವರಿಗೆ ಒಡಗಿಸಿದ್ದಾರೆ. ಆ ಸಮಿತಿಯವರು ಆ ಸ್ಥಳದಲ್ಲಿ 108 ಸೈಟುಗಳನ್ನು ಏಂಗಡಿಸಿ ಆ ಸೈಟುಗಳನ್ನು ಮಾರ್ಚ್ ಎಂಟನೆಯ ತಾರೀಖು ಪಬ್ಲಿಕ್ ಹರಾಜಿಗೆ ಇಟ್ಟಿದ್ದಾರೆ. ಅದರ ಉದ್ದೇಶ ವರ್ತಕರು ಆ ಸೈಟುಗಳನ್ನು ತೆಗೆದುಕೊಂಡು ಅಲ್ಲಿ ಕಟ್ಟಡ ಕಟ್ಟಿಕೊಂಡು ವ್ಯಾಪಾರ ಮಾಡಬೇಕೆಂಬುದು. ಆ ರೀತಿ ತೀರ್ಮಾನ ಮಾಡಿದ್ದಾರೆ. ಮೊದಲು ಸರ್ಕಾರದವರು 28 ಲಕ್ಷ ರೂಪಾಯಿಗಳ ಯೋಜನೆ ಹಾಕಿದಾಗ ವರ್ತಕರಿಗೆ ಮೊಬಲಗನ್ನು ಸಾಲದ ರೂಪವಾಗಿ ಒದಗಿಸಿ ಅದನ್ನು ಅವರಿಂದ ಕಂತುಗಳ ಪ್ರಕಾರ ವಸೂಲು ಮಾಡಿಕೊಳ್ಳಬೇಕು, ಸರ್ಕಾರದವರೇ ಮಳಿಗೆ ಕಟ್ಟಿಸಿ ಕೊಡಬೇಕು ಎಂದು ತೀರ್ಮಾನ ಮಾಡಲಾಯಿತು. ಆ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ ಮತ್ತು ಈ ಯೋಜನೆಯನ್ನು ಸರ್ಕಾರದವರು ಮುಂದುವರಿಸಲಿಲ್ಲ. ಈಚೆಗೆ ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯವರು ವರ್ತಕರೇ ಮಳಿಗೆ ಕಟ್ಟಿಕೊಂಡು ವ್ಯಾಪಾರ ನಡೆಸಬೇಕೆಂದು ತೀರ್ಮಾನಿಸಿ ಸೈಟುಗಳನ್ನು ಹರಾಜಿಗೆ ಇಟ್ಟಿರುತ್ತಾರೆ. ಆದರೆ ಸರ್ಕಾರದವರು ಮಾಡಿರುವ ಪ್ಲಾನ್ ಪ್ರಕಾರ ಹರಾಜಿನಲ್ಲಿ ಸೈಟನ್ನು ಕೊಂಡು ಯಾರ್ಡಿನಲ್ಲಿ ಮಳಿಗೆ ಕಟ್ಟಿಕೊಂಡು ವ್ಯಾಪಾರಮಾಡಲು ಶೇಕಡ 90 ಮಂದಿ ವರ್ತಕರಿಗೆ ಸಾಧ್ಯವಿರುವುದಿಲ್ಲ. ಈಗ ವರ್ತಕರು ತುಂಬ ಬಡವರಾಗಿ ಆರ್ಥಿಕಮಟ್ಟದಲ್ಲಿ ಬಹಳ ಹಿಂದುಳಿದಿರುವುದರಿಂದ ಸರ್ಕಾರದ ಉದ್ದೇಶ ವಿರುವಂತೆ ಅವರು ಯಾರ್ಡಿನಲ್ಲಿ ಕಟ್ಟಡಗಳನ್ನು ಸ್ವಂತವಾಗಿ ಕಟ್ಟಿಕೊಂಡು ವ್ಯಾಪಾರಮಾಡಲು ತುಂಬ ಕಷ್ಟವಿರುವುದರಿಂದ ಸರ್ಕಾರದವರು ಹಣವನ್ನು ಒದಗಿಸಿ ಸುಲಭ ಕಂತುಗಳಲ್ಲಿ ವರ್ತಕರಿಗೆ ಒದಗಿಸಿಕೊಟ್ಟು ವರ್ತಕರು ಮಳಿಗೆಗಳನ್ನು ಕಟ್ಟಿಕೊಂಡು ವ್ಯಾಪಾರ ಮಾಡಲು ಸಹಾಯ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ವರ್ತಕರು ಸಹಾ ಈ ರೀತಿಯಲ್ಲಿಯೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ನನಗೆ ತಿಳಿದಮಟ್ಟಿಗೆ ತಿಪಟೂರು ಟೌನಿನಲ್ಲಿ ಶೇಕಡ 90 ಮಂದಿ ವರ್ತಕರಿಗೆ ವ್ಯಾಪಾರಮಾಡಲು ಮೇಲೆ ಹೇಳಿದಂತೆ ಕಷ್ಟವಿರುವುದರಿಂದ ಸರ್ಕಾರದವರು ದಯವಿಟ್ಟು 5 ಲಕ್ಷ ರೂಪಾಯಿಗಳನ್ನು ಸಮಿತಿಗೆ ಕೊಟ್ಟು ಸಾಲದ ರೂಪದಲ್ಲಿ ಬಹಳ ಕಂತುಗಳಲ್ಲಿ ವಾಪಸು ಪಡೆಯುವಂತೆ ವರ್ತಕರಿಗೆ ಹಣ ಒದಗಿಸಿಕೊಟ್ಟು ವರ್ತಕರು ಕಟ್ಟಡ ಕಟ್ಟಿಸಿಕೊಂಡು ವ್ಯಾಪಾರ ಮಾಡಲು ಅವಕಾಶ ಕಲ್ಪಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸಾಮಾನ್ಯವಾಗಿ ಈ ಮಾರ್ಕೆಟ್ ಬಿಲ್ಡಿಂಗ್‌ಗಳನ್ನು ಕಟ್ಟಬೇಕಾದರೆ 10-12 ಸಾವಿರ ರೂಪಾಯಿಗಳ ಮೇಲೆ ಖರ್ಚು ಬರುತ್ತದೆ. ಹೀಗೆ ತಮ್ಮ ಕೈಯಿಂದ ದುಡ್ಡನ್ನು ಪೆಚ್ಚಮಾಡಿ ಕಟ್ಟಡಗಳನ್ನು ಕಟ್ಟಿಸಿಕೊಂಡು ಅಲ್ಲಿ ವ್ಯಾಪಾರಮಾಡತಕ್ಕಂಥ ಶೈತನ್ಯ ಕೇವಲ 8-10 ಜನ ದೊಡ್ಡ ದೊಡ್ಡ ವರ್ತಕರಿಗೆ ಮಾತ್ರ ಸಾಧ್ಯವಿರುತ್ತದೆ. ಬಾಕಿಯವರಿಗೆ ಸಾಧ್ಯವಾಗುವುದಿಲ್ಲ. ತಾವು ಈ ರೆಗ್ಯುಲೇಟ್ ಮಾರ್ಕೆಟ್ಟನ್ನು ಆ ಹೊಸ ಯಾರ್ಡಿಗೆ ವರ್ಗಾಯಿಸದೆ ಎಷ್ಟೆಷ್ಟು ನಿಧಾನ ಮಾಡಿದರೆ ಅಷ್ಟು ರೈತರಿಗೆ ಅವರು ಬೆಳೆದಂಥ ಬೆಳೆಗೆ ಒಂದು ನೇರವಾದ ಬೆಲೆ ಸಿಕ್ಕಲು ಅವಕಾಶವಿರುವುದಿಲ್ಲ. ಈ ಕಾರಣದಿಂದ ಸರ್ಕಾರದವರು ಬೇಗನೆ ನಾನಾಗಲೇ ಕೇಳಿದಂತೆ ಮೊಬಲಗನ್ನು ಒದಗಿಸಬೇಕು; ಇಲ್ಲವೇ ಸರ್ಕಾರದವರೇ ಅಲ್ಲಿ ಈ ಕಟ್ಟಡ